# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVII - 9-10 ಸಪ್ಟೆಂಬರ್-ಅಕ್ಟೋಬರ್ 1999

### ಈ ಸಂಚಿಕೆಯಲ್ಲಿ

ಸಂಪಾದಕ ಮಂಡಳಿ

ಕೆ. ರಘುನಾಥ್

ಸುಮಾ ದ್ವಾರಕಾನಾಥ್

ಭವನಿ ಚಂದ್ರಶೇಖರ್

ರಮಾ ಕೃಷ್ಣಸ್ವಾಮಿ

ರಮಾ ವಸಂತ್

ಲೀಲಾ ಜೋಯಿಸ್

ಕೆ. ಮಂಜುನಾಥಯ್ಯ

ಎಂ.ಎ.ಎನ್. ಪ್ರಸಾದ್

ಬಾಳ್ವೆಗೆ ಬೆಳಕಾದ ಸಾಹಿತಿ
ಪ್ರೊ. ಎ. ಎನ್. ಮೂರ್ತಿರಾವ್ ● ಡಾ. ಜಿ. ಎನ್. ಉಪಾಧ್ಯ 2

ಬೇಪದ ಅತಿಥಿಗಳು 5

ರೆಕ್ಕೆಗಳು ಪುಕ್ಕಗಳು ● ಕೆ. ತಾರಾ ಭಟ್, ಬೆಂಗಳೂರು 7

ಮೈಸೂರು ಅಸೋಸಿಯೇಷನ್ನಿನ
ರಂಗ ಮಂಟಪ ಉದ್ಘಾಟನೆ 8

ಸ್ವರ್ಣಗೌರಿ ಮಹಾಗಣಪತಿಯ
ಪೂಜಾ ಕಾರ್ಯಕ್ರಮ ● ರಮಾ ಕೃಷ್ಣ 10

(ಹರಿ)ದಾಸ ಸಾಹಿತ್ಯ -10 ● ರಮಾ ಕೃಷ್ಣ 11

ಸುತ್ತ-ಮುತ್ತ 13

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 ● Grams: "KARUNADU"

# ಬಾಳ್ವೆಗೆ ಬೆಳಕಾದ ಸಾಹಿತಿ - ಪ್ರೊ. ಎ. ಎನ್. ಮೂರ್ತಿರಾವ್

— ಡಾ. ಜಿ. ಎನ್. ಉಪಾಧ್ಯ
ಉಪನ್ಯಾಸಕ, ಕನ್ನಡ ವಿಭಾಗ, ಮುಂಬಯಿ ವಿ. ವಿ.

**ಈ ಶತಮಾನದ ಎಲ್ಲ ಆಗು ಹೋಗುಗಳಿಗೆ ಸಾಕ್ಷಿಯಾಗಿರುವ ಪ್ರೊ. ಎ. ಎನ್. ಮೂರ್ತಿ ರಾಯರು ಈಗ ನೂರರ ಸಂಭ್ರಮದಲ್ಲಿದ್ದಾರೆ. ಅವರ ಬದುಕು ಬರೆಹದ ಬಗೆಗಿನ ಕಿರುಲೇಖನವಿದು. ನಮ್ಮ ಹಿರಿಯರು ಶತಾಯುವಾಗು ಎಂದು ಹರಸುತ್ತಿದ್ದರು. ಈ ಹಾರೈಕೆಗೆ ಪಾತ್ರರಾಗಿದ್ದಾರೆ : ಪ್ರೊ. ಎ. ಎನ್. ಮೂರ್ತಿರಾವ್**

'ಆರೋಗ್ಯವೇ ಭಾಗ್ಯ' ಎಂಬುದು ಬಲ್ಲವರ ಮಾತು. ಶತಾಯುವಾಗು, ನೂರು ವರ್ಷ ಬದುಕು ಎಂದು ನಮ್ಮ ಹಿರಿಯರು ಹಾರೈಸುತ್ತಿದ್ದರು. ಈ ಹಾರೈಕೆಗೆ ಪಾತ್ರರಾಗಿದ್ದಾರೆ, ಕನ್ನಡದ ಹಿರಿಯ ಸಾಹಿತಿ ಪ್ರೊ. ಎ. ಎನ್. ಮೂರ್ತಿರಾವ್ ಅವರು ಇಪ್ಪತ್ತನೆಯ ಶತಮಾನದ ಎಲ್ಲ ಆಗು ಹೋಗುಗಳನ್ನು ಕಂಡ ನಮ್ಮ ಹಿರಿಯ ಲೇಖಕರಲ್ಲಿ ಅವರೂ ಒಬ್ಬರು. ಪ್ರೊ. ಮೂರ್ತಿರಾಯರು ಕನ್ನಡದ ಅತ್ಯುತ್ತಮ ಪ್ರಬಂಧಕಾರರಾಗಿಯೂ ಸೈ ಎನಿಸಿಕೊಂಡಿದ್ದಾರೆ. ಬದುಕನ್ನು ಒಂದು ಒಳ್ಳೆಯ ನಿಲುವಿನಿಂದ ನೋಡುವ, ಆರೋಗ್ಯಕರ ಧೋರಣೆಯನ್ನು ಪ್ರತಿಪಾದಿಸುವ ಈ ಲೇಖಕರಿಗೆ ಈ ಬಾರಿಯ ಮಾಸ್ತಿ ಪ್ರಶಸ್ತಿಯೂ ಲಭಿಸಿದೆ. ಏಳು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮೂರ್ತಿರಾಯರ ಕೃತಿಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಮೌಲ್ಯದ ದೃಷ್ಟಿಯಿಂದ ಹೆಚ್ಚಿನವು.

ಪ್ರೊ. ಎ. ಎನ್. ಮೂರ್ತಿರಾವ್ ಅವರು ಕ್ರಿ.ಶ. 1900 ಜೂನ್ ಹದಿನಾರರಂದು ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳಿನಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಲು ನರಸಿಂಹ ಮೂರ್ತಿರಾವ್ ಎಂಬುದಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮುಂದೆ ಮೈಸೂರಿಗೆ ಬಂದರು. ಇಂಗ್ಲೀಷ್ ಎಂ.ಎ. ಪದವಿ ಪಡೆದ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಇದಲ್ಲದೇ ಅಖಿಲ ಭಾರತ ಆಕಾಶವಾಣಿ ಮೈಸೂರು ನಿಲಯದ ನಿರ್ದೇಶಕರಾಗಿ, ಕನ್ನಡ ಸಾಹಿತ್ಯ ಮತ್ತು ಪರಿಷತ್ತಿನ ಅಧ್ಯಕ್ಷರಾಗಿ, ಮೈಸೂರು ಸರಕಾರದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಮೈಸೂರು ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿ, ಸಾಹಿತ್ಯ ಅಕಾಡೆಮಿಯ ಸಲಹಾ ಸಮಿತಿಯ ಸದಸ್ಯರಾಗಿ ಸಾಹಿತ್ಯಕ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬಹುಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಮೈಸೂರು ಮಹಾರಾಜ ಕಾಲೇಜಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸೂತ್ರಧಾರರೂ ಅವರಾಗಿದ್ದರು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿಗಳ ನಿಕಟ ಸಂಪರ್ಕವೂ ಅವರಿಗಾಯಿತು. ಕನ್ನಡ ವಾಙ್ಮಯದಲ್ಲಿ ದಿಗ್ಗಜರೆಂದೇ ಖ್ಯಾತಿವೆತ್ತ ಲೇ. ನಂ. ಶ್ರೀ ಬಿ. ಎಂ. ಶ್ರೀ, ಡಿ. ಎಲ್. ಎನ್., ಕುವೆಂಪು, ಪು.ತಿ.ನ., ಗೋರೂರು, ಕೆ. ಎಸ್. ನರಸಿಂಹ ಸ್ವಾಮಿ ಮೊದಲಾದವರೊಂದಿಗೆ ಅವರೂ ಬೆಳೆದರು. ಅದನ್ನೇ ಅವರು ಒಂದು ಕಡೆ 'ಸ್ನೇಹದ ವಿಷಯದಲ್ಲಿ ನಾನು ಭಾಗ್ಯಶಾಲಿ. ಬಹುಶ್ರುತರು, ಸರಳ ಹೃದಯರು, ಉದಾರ ಮನಸ್ಕರು, ಆದರ್ಶವಾದಿಗಳು, ಪ್ರೀತಿ ವಿಶ್ವಾಸಗಳನ್ನು ಕೊಟ್ಟು ಪಡೆಯುವುದರಲ್ಲಿ ಆನಂದ ಬಲ್ಲವರು ಇಂಥವರೊಡನೆ ನನಗೆ ಆತ್ಮೀಯತೆ ಲಭಿಸಿದೆ. ಎಂಬುದನ್ನು ಮುಕ್ತ ಮನಸ್ಸಿನಿಂದ ಹೇಳಿಕೊಂಡಿದ್ದಾರೆ.

**ಸಾಹಿತ್ಯಮಾರ್ಗ :** ಅನುಭವ, ಪಾಂಡಿತ್ಯ, ವಿವೇಚನೆಗಳಿಂದ ಅವರ ಕೃತಿಗಳು ಗಮನಾರ್ಹ ಎನಿಸಿಕೊಂಡು ಈ ಶತಮಾನದ ಕನ್ನಡದ ಕೆಲವು ಅಗತ್ಯಗಳನ್ನು ಪೂರೈಸಿವೆ. ಹಳೆಯ ತಲೆಮಾರಿನ ವಿದ್ವಾಂಸ, ಕವಿಗಳಲ್ಲಿರುವಂತೆ ಆಳವಾದ ಚಿಂತನೆ, ದರ್ಶನಗಳಿಂದ, ವಿಚಾರ ವಿಮರ್ಶೆಗಳಿಂದ ಮೂರ್ತಿರಾಯರ ಕೃತಿಗಳು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮೇಲ್ತರಗತಿಯದೆನಿಸಿವೆ. ಹಗಲು ಗನಸು, ಮಿನುಗು ಮಿಂಚು, ಅಲೆಯುವ ಮನ, ಸಮಗ್ರ ಲಲಿತ ಪ್ರಬಂಧಗಳು ಅವರ ಪ್ರಸಿದ್ಧ ಲಲಿತ ಪ್ರಬಂಧ ಕೃತಿಗಳು ಮೂರ್ತಿರಾಯರು ಹರಟೆಗಳನ್ನು ಬರೆದಿದ್ದಾರೆ. ಪ್ರಬಂಧಗಳನ್ನು ರಚಿಸಿದ್ದಾರೆ. 'ಹರಟೆಯಿಂದ ನಮ್ಮ ಮನಸ್ಸು ಹರ್ಷಗೊಂಡು ನಲಿದಾಡುತ್ತದೆಯಾದರೂ ಅದರ ಮೇಲೆ ಗಹನವಾದ ಚಿಂತನೆಯ ಹೊರೆಬಿದ್ದು ತ್ರಾಸವಾಗುವುದಿಲ್ಲ' ಎಂಬ ಖಚಿತ ನಿಲುವು ಅವರದು. ಕನ್ನಡದಲ್ಲಿ ಪ್ರಬಂಧ ಪ್ರಪಂಚಕ್ಕೊಂದು ನಿರ್ದಿಷ್ಟವಾದ, ಖಚಿತವಾದ ದಿಕ್ಕು ದಿಸೆಯನ್ನು ಹಾಕಿಕೊಟ್ಟ ಕೀರ್ತಿಗೂ ಅವರು ಭಾಜನರಾಗಿದ್ದಾರೆ.

ಒಬ್ಬ ಭಾವಜೀವಿಯಾಗಿ, ಮುಕ್ತ ಮನಸ್ಸಿನಿಂದ ತಮ್ಮ ಬದುಕಿನ ಹಿನ್ನೋಟವನ್ನು ಸಂಜೆಗಣ್ಣಿನ ಹಿನ್ನೋಟ ಕೃತಿಯಲ್ಲಿ ಆತ್ಮೀಯವಾಗಿ ಅನಾವರಣಗೊಳಿಸಿದ್ದಾರೆ. ಇದು ಅವರ ಆತ್ಮ ಕಥನ. ಇಲ್ಲಿಯ ಅನೇಕ ಅಧ್ಯಾಯಗಳು ಬಿಡಿ ಬಿಡಿ ಪ್ರಬಂಧಗಳಾಗಿ ನಿಲ್ಲಬಲ್ಲ ಸಾಮರ್ಥ್ಯವನ್ನೂ ಪಡೆದಿವೆ. ಮಾತುಗಾರಿಕೆಯ ಹದ, ಔಚಿತ್ಯ, ಬದುಕಿನ ಬಗೆಗೆ ಅವರಿಗಿರುವ ಅಪಾರ ಪ್ರೇಮ, ಮನುಕುಲದ ಬಗೆಗಿನ ಕಾಳಜಿಗಳು ಅವರ ಬರವಣಿಗೆಯಲ್ಲಿ ಎದ್ದು ಕಾಣುತ್ತವೆ. ಅವರದು ಆರೋಗ್ಯ ಪೂರ್ಣವಾದ ಮನಸ್ಸು.

ವಿಮರ್ಶಕರಾಗಿ ಅವರು ಸಾಧಿಸಿತೋರಿಸಿದ ಹೆಜ್ಜೆ ಗುರುತುಗಳ ಅತ್ಯಂತ ಗಮನಾರ್ಹವಾಗಿವೆ. ಷೇಕ್ಸ್ ಪಿಯರ್, ಮಾಸ್ತಿ ಅವರ ಕತೆಗಳು, ಬಿ. ಎಂ. ಶ್ರೀಕಂಠಯ್ಯ, ಪೂರ್ವಸೂರಿಗಳೊಡನೆ, ಸಾಹಿತ್ಯ ಮತ್ತು ಸತ್ಯ, ವಿಮರ್ಶಾತ್ಮಕ ಪ್ರಬಂಧಗಳು, ಅಮೇರಿಕನ್ ಸಾಹಿತ್ಯ ಮೊದಲಾದ ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ಸಾಹಿತ್ಯ ಮತ್ತು ಸತ್ಯ ಎಂಬ ಲೇಖನದಲ್ಲಿ ಅವರು ಎತ್ತಿರುವ ಅನೇಕ ಚರ್ಚೆಗಳು ಇಂದಿಗೂ ಎಂದಿಗೂ ಪ್ರಸ್ತುತವೇ ಆಗಿವೆ. 'ಪರಮಸತ್ಯ' ಎಂಬ ಪರಿಕಲ್ಪನೆಯನ್ನು ಅವರು ಸಕಾರಣವಾಗಿ ನಿರಾಕರಿಸುತ್ತಾರೆ. ಅಲ್ಲದೇ 'ಪರಮ ಸತ್ಯವನ್ನು ಕಾಣುವುದು ಸಾಧ್ಯವಾಗಬೇಕಾದರೆ ಇಡೀ ವಿಶ್ವವೇ ಏಕಕಾಲದಲ್ಲಿ ನಮ್ಮ ಅನುಭವ ಕ್ಷೇತ್ರವಾಗಬೇಕು. ಮಾನವ ಮಾತ್ರನಿಗೆ ಅದು ಅಸಾಧ್ಯ. ವ್ಯಾಸ, ವಾಲ್ಮೀಕಿ, ಷೇಕ್ಸ್ ಪಿಯರ್ ಇವರೆಲ್ಲ ಬೆರಗುಗೊಳಿಸುವಷ್ಟು ವಿಶಾಲವಾದ ಅನುಭವವುಳ್ಳವರು. ಅವರ ದೃಷ್ಟಿಯೂ

ಅನನ್ಯತವಾದುದು. ಅವರೆ ಇಂಥವರ ಅನುಭವ ಕೂಡಾ ವಿಶ್ವದ ಮಾತಂತಿರಲಿ ಎಲ್ಲ ಮಾನವರ ಜೀವನವನ್ನು ಕೂಡಾ ಒಳಗೊಂಡದ್ದಲ್ಲ. ಮಹಾಭಾರತದ ಹೊರಗಿರುವುದೆಲ್ಲ ಅದರಲ್ಲಿರುವುದೇ. ಅದರಲ್ಲಿ ಇಲ್ಲದ್ದು ಮತ್ತೆಲ್ಲೂ ಇಲ್ಲ ಎಂಬುದು ಉತ್ಪ್ರೇಕ್ಷೆಯ ಮಾತು. ವ್ಯಾಸ ಕಂಡದ್ದು ಕೂಡ ಯಾವುದೋ ಒಂದು ಕಾಲದ, ಒಂದು ಕ್ಷೇತ್ರದ, ಜೀವನದಲ್ಲಿ ಯಾವುದೋ ಒಂದು ಭಾಗ ಮತ್ತು ಆ ಭಾಗದ ಸಮಸ್ಯೆಗಳಲ್ಲಿ ಕೆಲವು ! ಎಲ್ಲ ಕಾಲವನ್ನು ಎಲ್ಲ ದೇಶವನ್ನು, ಮಾನವನ ಮನಸ್ಸಿನ ಸಾವಿರ ಹುಚ್ಚಾಟಗಳನ್ನೂ, ನೋವು ನಲಿವು ಕ್ರೌರ್ಯ ಕರುಣೆಗಳೆಲ್ಲವನ್ನೂ ಅವುಗಳ ಪರಿಣಾಮವನ್ನೂ ಮೇಲೆ ನಿಂತು ನೋಡ ಬಲ್ಲವನು, ವಿಶ್ವವ್ಯವಸ್ಥೆಗೆ ಇವೆಲ್ಲ ಹೇಗೆ ಹೊಂದಿಕೊಂಡಿವೆ ಎಂಬುದನ್ನು ತಿಳಿಯಬಲ್ಲವನು (ದೇವನು) ಒಬ್ಬನಿದ್ದಾರೆ ಅವನು ಕಾಣುವ ಸತ್ಯ ಪರಮ ಸತ್ಯ ಅದು ಅಸಾಧ್ಯ ಎನ್ನತ್ತಾ ಅಲ್ಲಿನ ಇತಿಮಿತಿಗಳನ್ನೂ ಗುರುತಿಸುತ್ತಾರೆ. ಇಂಥ ಜಾಗ್ರತ ಪ್ರಜ್ಞೆ ನಮ್ಮ ಎಷ್ಟು ಮಂದಿ ಲೇಖಕರಲ್ಲಿದೆ ? ಎಂದು ಪ್ರಶ್ನೆ ಹಾಕಿಕೊಂಡರೆ ಸಿಗುವ ಉತ್ತರ ನಿರಾಶದಾಯಕ ವಾದುದು. ಇಂಥ ಬೆಡಿಗೆಬ್ಬಿಸುವ ಗುಣದ ಅವರ ಸಾಹಿತ್ಯದಲ್ಲಿದೆ ಎಂಬುದು ಬರೇ ಒಣ ಅಭಿಮಾನದ ಮಾತಲ್ಲ. ಅದಾಗಲೂ ಹೊಸತನವನ್ನು ಸ್ವೀಕರಿಸುವ ಹಂತದಲ್ಲಿ ಅವರು ಪರಂಪರೆಯನ್ನು ಸಾರಾಸಗಟಾಗಿ ನಿರಾಕರಿಸುವುದಿಲ್ಲ. 'ಹಳೆಬೇರು ಹೊಸ ಚಿಗುರು' ಎಂಬ ಸಮನ್ವಯ ಪರಿಪೂರ್ಣ ದೃಷ್ಟಿಕೋನ ಅವರದು. 'ಪ್ರೀತಿ ಪಾತ್ರಳಾದ ಪತ್ನಿಯು ಗಂಡನ ಅರಿವಿಲ್ಲದೇ ಅವನ ಸ್ವಭಾವವನ್ನು ಮಾರ್ಪಡಿಸುವಂತೆ ಸಾಹಿತ್ಯವೂ ನಮಗೆ ತಿಳಿಯದಂತೆ ನಮ್ಮ ಜೀವನಕ್ಕೆ ಸಂಸ್ಕೃತಿಯ ಮೆರಗು ಕೊಡುತ್ತದೆ' ಎಂಬುದನ್ನು ಅವರು ಗಟ್ಟಿಯಾಗಿ ನಂಬಿಕೊಂಡು ಬಂದಿದ್ದಾರೆ.

ಪ್ರೊ. ಮೂರ್ತಿರಾಯರು ಸ್ವತಃ ಇಂಗ್ಲೀಷು ಪ್ರಾಧ್ಯಾಪಕರು ಇಂಗ್ಲೀಷ್ ಸಾಹಿತ್ಯದ ಒಳ ಹೊರಗನ್ನು ಬಲ್ಲ ವಿದ್ವಾಂಸರು. ನಮ್ಮಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರು, ಅವರ ವಿದ್ಯಾರ್ಥಿಗಳು ಹೆಚ್ಚಾಗಿ ಸಂಸ್ಕೃತವನ್ನೂ ಒಳಗೊಂಡಂತೆ ಭಾರತೀಯ ಭಾಷೆಗಳನ್ನು ನಿಕೃಷ್ಟವಾಗಿ ಕಾಣುವುದು ಸಾಮಾನ್ಯ ಸಂಗತಿ. ಇಂಗ್ಲೀಷ್‌ಗೆ ಸರಿಸಾಟಿಯಾದ ಭಾಷೆ ಮತ್ತೊಂದಿಲ್ಲ ಎಂಬ ಭಿಮಾನ ಅವರದು. ಆದರೆ ಮೂರ್ತಿರಾಯರು ಮಾತ್ರ ಮೇಲಿನ ಮಾತುಗಳಿಗೆ ಅಪವಾದವಾಗಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾದ ಮೇಲೂ ಹತ್ತಾರು ವರ್ಷ ಸಂಸ್ಕೃತ ಸಾಹಿತ್ಯವನ್ನು ಅಧ್ಯಯನ ಮಾಡಿದರು. ಅಲ್ಲಿರುವ ಸಾಹಿತ್ಯದ ಸಾರ - ಸತ್ವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೂ 'ಪೂರ್ವಕಾಲದ ಪಂಡಿತರ ಕ್ರಮವನ್ನು ಅನುಸರಿಸಿ ಭಾಷ್ಯ ಸಹಿತ ವ್ಯಾಸಂಗ ಮಾಡುವುದು ನಮಗೆ ಸಾಧ್ಯವಾಗಿಯೇ ಇಲ್ಲ. ಹಾಗೆ ಮಾಡದ ಹೊರತು ಅವುಗಳನ್ನು ಕುರಿತು ಜ್ಞಾನ ನಿಷ್ಪನ್ನವಾಗುವುದಿಲ್ಲ. ಆದ್ದರಿಂದ ವೇದಾಂತದ ವಿಷಯ ಬರೆಯಲಾಗಲಿ, ಮಾತನಾಡಲಾಗಲಿ ನನಗೆ ಅಧಿಕಾರವಿಲ್ಲ' ಎಂಬ ಅವರ ವಿನಯ ಹಾಗೂ ಸೌಜನ್ಯಕ್ಕೆ ಯಾರೂ ಮಾರು ಹೋಗಲೇಬೇಕು. ಪ್ರೊ. ಮೂರ್ತಿರಾಯರು ಹೇಳಿ ಕೇಳಿ ಡಾ. ಎಸ್. ರಾಧಾಕೃಷ್ಣನ್ ಅವರ ಶಿಷ್ಯರಲ್ಲವೇ. ಇಂಥ, ಗುರು - ಶಿಷ್ಯರು ನಮ್ಮಲ್ಲಿ ಎಷ್ಟು ಮಂದಿ ಇದ್ದಾರೆ ?

ಜೀವನದಲ್ಲಿ ಪ್ರತಿಯೊಂದನ್ನು ತಿಳಿದು ಕೊಳ್ಳಬೇಕು ಎಂಬ ಅವರ ಅದಮ್ಯ ಉತ್ಸಾಹ, ಕುತೂಹಲ ಅನನ್ಯವಾದುದು. ನಮ್ಮ ನಡುವಿರುವ, ನಮಗೆ ಮಾದರಿಯಾಗಿರುವ ಅಪರೂಪದ ಸಾಹಿತಿ ಅವರು. 'ನಾನು ಬರೆಯುತ್ತಿರುವುದು ಯಾವ ವರ್ಗದವನಾಗಿಯೂ ಅಲ್ಲ. ಯಾವ ಜಾತಿಯವನಾಗಿಯೂ ಅಲ್ಲ, ಯಾವ ಜನಾಂಗ, ವೃತ್ತಿ ಅಥವಾ ಮತದವನಾಗಿಯೂ ಅಲ್ಲ. ಕೇವಲ ಸಾಮಾನ್ಯ ಮಾನವನಾಗಿ' ಎಂಬ ಅವರ ನಡೆನುಡಿ ನೇರವಾದುದು, ಸರಳವಾದುದು, ಪ್ರಾಮಾಣಿಕವಾದುದು. ಮೂರ್ತಿರಾಯರ ಘನವ್ಯಕ್ತಿತ್ವವನ್ನು ಗಮನಿಸಿ ಡಾ. ಪ್ರಭುಶಂಕರ ಅವರು ಒಂದು ಕಡೆ ಅವರನ್ನು 'ಮಾನವ ಚೇತನ ವಿಕಾಸದ ಹಾದಿಯಲ್ಲಿ ಒಂದು ಮೈಲಿಗಲ್ಲು' ಎಂದು ವರ್ಣಿಸಿದ್ದು ಬರೇ ಕೊಂಡಾಟದ ಮಾತಲ್ಲ.

ಅನುವಾದ, ರೂಪಾಂತರ, ಭಾಷಾಂತರ ಕ್ಷೇತ್ರಗಳಲ್ಲಿಯೂ ಅವರು ಕೆಲಸ ಮಾಡಿದ್ದಾರೆ. ಆಷಾಢಭೂತಿ (ನಾಟಕ) ಮೋಲಿಯೇರನ ಎರಡು ನಾಟಕಗಳು, ಚಂಡಮಾರುತ (ನಾಟಕ), ಸಾಕ್ರೆಟೀಸನ ಕೊನೆಯ ದಿನಗಳು, ಪಾಶ್ಚಾತ್ಯ ಸಣ್ಣ ಕತೆಗಳು, ಯೋಧನ ಪುನರಾಗಮನ ಮೊದಲಾದ ಕೃತಿಗಳನ್ನು ಅವರು ಕನ್ನಡಕ್ಕೆ ನೀಡಿದ್ದಾರೆ. ಶಿವರಾಮ ಕಾರಂತರ ಪ್ರಸಿದ್ಧ ಕಾದಂಬರಿ 'ಮರಳಿ ಮಣ್ಣಿಗೆ'ಯನ್ನು ಇಂಗ್ಲೀಷ್‌ಗೆ The Return to the Soil ಎಂದು ಅನುವಾದಿಸಿದ್ದಾರೆ. ಅವರ ವಯಸ್ಸಿನ ಅಮೇರಿಕಾ ಯಾತ್ರೆ' ಅವರ ಪ್ರವಾಸ ಕಥನ ಕೃತಿ. ಅವರ ಚಿತ್ರಗಳು ಪತ್ರಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಪ್ರಾಪ್ತವಾಗಿದೆ.

### ಜನಪರ ನಿಲುವು.

ಮೂರ್ತಿರಾಯರು ಬರೆದ ದೇವರು ಕೃತಿ ಕನ್ನಡ ವಾಙ್ಮಯದಲ್ಲೇ ವಿಶಿಷ್ಟ ಸ್ಥಾನಮಾನವನ್ನು ಪಡೆದುಕೊಂಡಿದೆ. ಅವರ ಬಹಳಷ್ಟು ಬರಹಗಳು ಕಥೆ ಹಾಗೂ ಲಲಿತ ಪ್ರಬಂಧಗಳು ಗಡಿ ರೇಖೆಗಳ ನಡುವೆ ಸುಳಿದಾಡುತ್ತಿರುತ್ತವೆ. ಚಿಂತನ ಪರತೆಯೇ ಅಲ್ಲಿಯ ಸ್ಥಾಯಿಭಾವ, ವಾಸ್ತವವಾಗಿ ಅವರದು ಪ್ರಗತಿಪರ ದೃಷ್ಟಿಕೋನ. ದೇವರು ದಿಂಡರ ಬಗೆಗೆ ಅವರಿಗೆ ನಂಬಿಕೆಯಿಲ್ಲ. 'ದೇವರನ್ನು ನಂಬುವುದಿಲ್ಲ ಎಂದು ನಾನೇನು ಪಣತೊಟ್ಟಿಲ್ಲ. ನನ್ನ ಅಪನಂಬಿಕೆ ಪ್ರಯತ್ನ ಪೂರ್ವಕವಾಗಿ ಬರಮಾಡಿಕೊಂಡದ್ದಲ್ಲ. ನಂಬಿಕೆ ಬರಲೊಲ್ಲದು ಅಷ್ಟೇ. ಇತರರಿಗೆ ದೈವ ಭಕ್ತಿಯಿಂದ ಶಾಂತಿ ಬರುವುದಾದರೆ ಬರಲಿ. ಅದರಿಂದ ಸಜ್ಜನಿಕೆಗೆ ಉತ್ತೇಜನ ದೊರಕುವುದಾದರೆ ಅವರ

FOR ALL YOUR DOMESTIC
AND INTERNATIONAL
TRAVEL ARRANGEMENTS

CONTACT

AUGUST
TRAVEL
SERVICE

Agents For
INDIAN AIRLINES &
JET AIRLINES

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 768 2591 * 768 2558
767 0902
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

ಭಕ್ತಿ ಸತತವಾಗಿ ಇರಲಿ ಎಂದು ಪ್ರಾರ್ಥಿಸಲು ನಾನು ಸಿದ್ಧ. ನನಗೆ ನಂಬಿಕೆ ಬರಲೊಲ್ಲದು; ಅದು ನನ್ನ ತಪ್ಪಲ್ಲ. ದೇವರ ಅಸ್ತಿತ್ವದಲ್ಲೇ ನಂಬಿಕೆಯಿಲ್ಲವಾದ್ದರಿಂದ ಅವನು ಶಿಕ್ಷಿಸಿಯಾನು ಎಂಬ ಭಯವಿಲ್ಲ. ಪುನರ್ ಜನ್ಮದಲ್ಲಿ ನಂಬಿಕೆಯಿಲ್ಲವಾದ್ದರಿಂದ ಮುಂದೆ ಕಷ್ಟವನ್ನು ಅನುಭವಿಸಬೇಕಾಗಬಹುದು ಎಂಬ ಶಂಕೆಯಿಲ್ಲ. ಸ್ವರ್ಗ ನರಕಗಳಲ್ಲಿ ನಂಬಿಕೆಯಿಲ್ಲವಾದ್ದರಿಂದ ಸ್ವರ್ಗದ ಹಂಬಲವೂ ಇಲ್ಲ. ನರಕದ ಭಯವೂ ಇಲ್ಲ. ನನಗೆ ಇದರಲ್ಲಿ ನಂಬಿಕೆಯಿಲ್ಲ, ಅದರಲ್ಲಿ ನಂಬಿಕೆಯಿಲ್ಲ, ಇಲ್ಲಗಳ ಪಟ್ಟಿ ದೊಡ್ಡದಾಯಿತು. ನನ್ನ ಬದುಕು ನಕಾರದ ಭಜನೆಯೋ ಅಥವಾ ನನ್ನ ನಂಬಿಕೆಗೆ ಪಾತ್ರವಾಗಿರುವುದು ಏನಾದರೂ ಉಂಟೋ? ಉಂಟು, ಇಹ ಜೀವನದಲ್ಲಿ ನಂಬಿಕೆ ಉಂಟು... ಲೋಕದಲ್ಲಿ ಸಂಕಟ ಕಡಿಮೆಯಾಗುವಂತೆ ಸಹ ಮಾನವರ ಬದುಕು ಸುಖ ಸಮೃದ್ಧವಾಗುವಂತೆ, ಕೈಲಾದಷ್ಟನ್ನು ಮಾಡುವುದು ಕರ್ತವ್ಯ ಎಂಬ ನಂಬಿಕೆಯುಂಟು. ಎಂಬಲ್ಲಿ ಮನುಕುಲದ ಕುರಿತು ಅವರಿಗಿರುವ ಕಾಳಜಿ ಎದ್ದು ಕಾಣುತ್ತದೆ. ಮೂರ್ತಿರಾಯರ ಸಾಹಿತ್ಯ ಸಂಪತ್ತಿನಾಚೆಯ ವ್ಯಕ್ತಿತ್ವವೂ ವಿಶಿಷ್ಟವಾದುದು. ಬದುಕಿನ ಚೆಲುವು ಅವರಿಗೆ ಮೌಲಿಕವಾದುದು. ಬದುಕಿನಲ್ಲಿ ಬಂದದ್ದನ್ನೆಲ್ಲ ಎದುರಿಸಬೇಕೇ ಹೊರತು ಅದಕ್ಕೆ ಬೆನ್ನು ಹಾಕಬಾರದು. ಜೀವನೋತ್ಸಾಹ ಕಳೆದುಕೊಳ್ಳಬಾರದು.T ಮಾನವನಿಗೆ ತೀವ್ರವಾದ ದುಃಖವನ್ನು ದೀರ್ಘಕಾಲ ಅನುಭವಿಸುವ ಶಕ್ತಿಯೇ ಇಲ್ಲ. ಆದರೆ ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿಯಿದೆ. ಆದುದರಿಂದಲೇ ಮನುಕುಲ ತನ್ನ ಕಷ್ಟ, ನಿಷ್ಠುರಗಳೇನಿದ್ದರೂ ನಾಶವಾಗದೇ ಉಳಿದಿದೆ. ಆದುದರಿಂದಲೇ ನಾವು ಬದುಕನ್ನು ತಿರಸ್ಕರಿಸದೇ ಇರುವುದು ಸಾಧ್ಯವಾಗಿದೆ. ಸಂಸಾರ ಸಾಗರದಿಂದ ಪಾರುಮಾಡು ಎಂದು ಅಂಗಲಾಚುವುದು, ಅ ಸಾರ ಈ ಸಂಸಾರ ಎಂದು ಅದನ್ನು ಧಿಕ್ಕರಿಸುವುದು, ಕಾಂತೆ ಯಾರು, ಪುತ್ರರಾರು, ಬೇಡ ಈ ಮೋಹಜಾಲ ಎಂದು ಏಕನಾದದ ಶ್ರುತಿಗೆ ಹಾಡುವುದು. ಇದೆಲ್ಲ ಹೃದಯದಿಂದ ಬಂದದ್ದಲ್ಲ. ದಾಸರೂ ಸಂತರೂ ಕಲಿಸಿದ ಗಿಳಿಪಾಠ ಎಂಬ ದೃಢ ನಿಲುವು ಅವರದು. ಸಮಾಜದ ಜನತೆ ನಡೆಯಬೇಕಾದ ಸರಿದಾರಿಯ ಶೋಧಕ್ಕೂ ಅವರು ಮುಂದಾಗಿದ್ದಾರೆ. ಸಮಾಜದ ಸ್ವಾಸ್ಥ್ಯ ಕೆಡಬಾರದು, ಈ ಬದುಕು ಹಸನಾಗಬೇಕು ಎಂಬ ಮಹದಾಸೆ ಅವರದು.

ಸಮಾಜದ ಎಲ್ಲ ಬಗೆಯ ಆಗು ಹೋಗುಗಳಿಗೂ ಅವರು ಸ್ಪಂದಿಸಿದ್ದಾರೆ. ಜಗತ್ತಿನ ಅನೇಕ ರಾಷ್ಟ್ರಗಳನ್ನು ಅವುಗಳ ಪ್ರಗತಿಯನ್ನು ಕಂಡ ಅವರು ಈ ರಾಷ್ಟ್ರದ ಹೀನಾಯ ಸ್ಥಿತಿಗೆ ಮರುಕ ವ್ಯಕ್ತ ಪಡಿಸಿದ್ದಾರೆ. ಈಗ ರಾಜಕೀಯ ಎಂಬ ಆಕ್ಟೋಪಸ್ (Octopus) ತನ್ನ ಹೀರುದೋಳು (tentacles) ಗಳನ್ನು ಎಲ್ಲ ಕಡೆಗೂ ಚಾಚಿ ಸಮಾಜದ ಸತ್ವವನ್ನು ಹೀರುತ್ತಿದೆ. ರಾಷ್ಟ್ರಕರಿಂದ (Statesmen) ನಿರೀಕ್ಷಿಸಬಹುದಾದ ನಿರೀಕ್ಷಿಸಬಹುದಾದ ನಿಃಸ್ವಾರ್ಥ ಸೇವೆಯನ್ನು ರಾಜಕಾರಣಿಗಳಿಂದ (politicians ರಿಂದ) ನಾವು ನಿರೀಕ್ಷಿಸಬಹುದೇ!? ಅದೇ ಡೆಮಾಕ್ರಸಿಯಲ್ಲಿರುವ ದೊಡ್ಡ ವೇಷ. ಅದನ್ನು ಚಾಲೂ ಮಾಡುತ್ತಿರುವರು ರಾಷ್ಟ್ರಕರಲ್ಲ, ರಾಜಕಾರಣಿಗಳು. ಸೇವೆ ಮಾಡಲು ಅವರಿಗೆ ಕಾಲಾವಕಾಶ ಎಲ್ಲಿದೆ ! ಅವರು ಪಾರ್ಟಿ ಕಟ್ಟಬೇಕು. ಪಾರ್ಟಿಗಾಗಿ ಹಣ ಶೇಖರಿಸಬೇಕು. ನ್ಯಾಯವಾಗಿಯೋ ಅನ್ಯಾಯವಾಗಿಯೋ ಅದು ಮುಖ್ಯವಲ್ಲ. ಎದುರು ಪಕ್ಷದವರ ದೋಷಗಳನ್ನೆಲ್ಲ ಬೆದರಿ ಹೊರಗೆಳೆಯಬೇಕು. ವಿದೇಶ ಪ್ರಯಾಣದ ಸೌಲಭ್ಯ ದೊರಕಿಸಿಕೊಂಡು ರಾಷ್ಟ್ರದ ವೆಚ್ಚದಲ್ಲಿ ದೇಶ ವಿದೇಶ ಅಲೆಯಬೇಕು. ಚಳುವಳಿ

(ಪುಟ 7ಕ್ಕೆ)


# THE MYSORE ASSOCIATION, BOMBAY

Cordially invites you to the
inauguration of its

**NEW AUDITORIUM**

at 393, Bhaudaji Road, Matunga, Mumbai
On Saturday, the 16th Oct.,'99 at 6.00 p.m.

His Excellency
**Dr. P. C. ALEXANDER**
Governor of Maharashtra
has kindly consented to inaugurate the auditorium

**Smt. ACKAMA ALEXANDER**
will grace the occasion
Kindly be in your seat by 5.50 p.m.

**-: PROGRAMME :-**

| | |
|---|---|
| 6.00 p.m. | Receiving the Guests |
| 6.05 p.m. | Audio Visual Presentation on the Association |
| 6.17 p.m. | Invocation |
| 6.20 p.m. | Welcome by Sri S. Doreswamy President, The Mysore Association |
| 6.25 p.m. | Floral Tributes |
| 6.27 p.m. | Inauguration of the Auditorium |
| 6.30 p.m. | Felicitation of senior members of Association |
| 6.45 p.m. | Address by Governor |
| 6.55 p.m. | Vote of Thanks by Sri M.A.N. Prasad, Secretary |

**INTERVAL**

| | | |
|---|---|---|
| 7.15 p.m. | Carnatic Classical Music | Concert |
| | Vidwan Sri R.K. Srikantan | Vocal |
| | Sri R.S. Ramakantha | |
| | Sri Balakrishna | Violin |
| | Sri Sridhar Parthasarathy | Mridangam |
| | Sri Shekar | Ghatham |

# ಬೇಡದ ಅತಿಥಿಗಳು

**ಕ**ನ್ನಡದ ಹೆಸರಾಂತ ಪ್ರಬಂಧಕಾರರಲ್ಲಿ ಪ್ರೊ. ಎ. ಎನ್. ಮೂರ್ತಿರಾಯರು ಒಬ್ಬರು. ಕನ್ನಡ ಪ್ರಬಂಧ ಪ್ರಪಂಚಕ್ಕೊಂದು ನಿರ್ದಿಷ್ಟವಾದ, ಖಚಿತವಾದ ದಿಕ್ಕು ದಿಸೆಯನ್ನು ಹಾಕಿಕೊಟ್ಟ ಕೀರ್ತಿಗೂ ಅವರು ಭಾಜನರಾಗಿದ್ದಾರೆ. ಅವರ ಬಹಳಷ್ಟು ಬರಹಗಳು ಕಥೆ ಹಾಗೂ ಲಲಿತ ಪ್ರಬಂಧಗಳ ಗಡಿರೇಖೆಗಳ ನಡುವೆ ಸುಳಿದಾಡುತ್ತಿರುತ್ತದೆ. ಚಿಂತನ ಪರತೆಯೇ ಅಲ್ಲಿಯ ಸ್ಥಾಯಿ ಭಾವ ಮಾದರಿಗಾಗಿ ಪ್ರೊ. ಮೂರ್ತಿರಾಯರ 'ಬೇಡದ ಅತಿಥಿಗಳು' ಪ್ರಬಂಧವನ್ನು ಇಲ್ಲಿ ಆಯ್ಕೆಮಾಡಿಕೊಡಲಾಗಿದೆ. ಪರಂಪರೆಯ ಅರಿವು ಸಮಕಾಲೀನತೆ, ಪ್ರಗತಿಪರ ಚಿಂತನೆ, ತಿಳಿ ಹಾಸ್ಯ, ವಿಭಿನ್ನ ಲೋಕ ದೃಷ್ಟಿ, ವಾಸ್ತವಿಕ ದೃಷ್ಟಿಕೋನ, ದ್ರುತ ಗತಿಯಲ್ಲಿ ಬದಲಾಗುತ್ತಿರುವ ನಮ್ಮ ಬದುಕಿನ ವಿವಿಧ ಮಗ್ಗುಲುಗಳ ಚಿಂತನೆ ಈ ಲಲಿತ ಪ್ರಬಂಧದಲ್ಲಿದೆ. ಅವರ ಪ್ರಬಂಧಗಳನ್ನು ಮತ್ತೆ ಮತ್ತೆ ಓದಬೇಕೆನಿಸುವುದು ಈ ಕಾರಣಕ್ಕಾಗಿಯೇ.

### ಬೇಡದ ಅತಿಥಿಗಳು

ವೇದೋಪನಿಷತ್ತುಗಳ ಕಾಲದಲ್ಲಿ ಇಂಥ ವಿಷಯವನ್ನು ಕುರಿತು ಯಾರಾದರೂ ಮಾತಾಡಿದ್ದರೆ ಅವರಿಗೆ ಸಮಾಜ ಯಾವ ಕಠಿಣ ಶಿಕ್ಷೆಯನ್ನು ವಿಧಿಸುತ್ತಿತ್ತೋ ಕಾಣೆ. ಆಗ ಅತಿಥಿ ಸತ್ಕಾರವು ಗೃಹಸ್ಥನ ಮುಖ್ಯ ಧರ್ಮಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿತ್ತು. ಈ ಕಲಿಗಾಲದಲ್ಲೂ ಕೂಡ ನಮ್ಮ ಮನೆಗಳಲ್ಲಿ 'ಅತಿಥಿದೇವೋ ಭವ' ಎಂಬ ಮಂತ್ರವನ್ನು ಯಾಂತ್ರಿಕವಾಗಿಯಾದರೂ ಉಚ್ಚರಿಸುತ್ತೇವೆ. ವೇದೋಪನಿಷತ್ತುಗಳ ಕಾಲದ ಮಾತು ಹಾಗಿರಲಿ, ನಾನು ಕಂಡ ಹಾಗೆಯೇ ಮೊನ್ನೆಯವರೆಗೂ ಅತಿಥಿ ಸತ್ಕಾರಕ್ಕೆ ಪ್ರಾಶಸ್ತ್ಯವಿತ್ತು. ನಮ್ಮ ಅಜ್ಜ ಮನೆಯಲ್ಲಿ ಯಾರೂ ಅತಿಥಿಗಳಲ್ಲದ ದಿನ ಮಧ್ಯಾಹ್ನ ಹನ್ನೆರಡು ಗಂಟೆಯಲ್ಲಿ ಊರಿನ ಹೆಬ್ಬಾಲಿಗೆ ಹೋಗಿ ನಿಂತು ಅಭ್ಯಾಗತರನ್ನು ಊಟಕ್ಕೆ ಕರೆತರುತ್ತಿದ್ದರಂತೆ. ಅತಿಥಿಗಳು ಯಾರೂ ಇಲ್ಲದೆ ಮನೆಯವರು ಮಾತ್ರ ಕೂತು ಊಟ ಮಾಡಬೇಕಾಗಿ ಬಂದರೆ ಅದೊಂದು ದುರ್ದಿನವೆಂದೇ ಅವರ ಭಾವನೆ. ನಾವಂತೂ ಭಾರತೀಯರು, ಅತಿಥಿಸತ್ಕಾರ ನಮ್ಮಲ್ಲಿ ರಕ್ತಗತವಾಗಿ ಬಂದದ್ದು, ಎನ್ನಬಹುದು. ಯವನರೆಂದು ನಾವು ಅಲ್ಲಗಳೆಯುತ್ತಿದ್ದ ಗ್ರೀಕರು ಸಹಿತ ಅತಿಥಿ ಸತ್ಕಾರಕ್ಕೆ ಪ್ರಮುಖ ಸ್ಥಾನವಿತ್ತೆಂಬುದಂತೂ ನಿಜ. ಆದರೆ ಆ ಕಾಲ ಹೋಯಿತು. ಇವೊತ್ತು ನೋಡಿ, ಅದೇ ಆರ್ಯಧರ್ಮಕ್ಕೆ ಉತ್ತರಾಧಿಕಾರಿಯಾಗಿರುವ ನಾನು 'ಬೇಡದ ಅತಿಥಿಗಳ' ವಿಷಯ ಬಹಿರಂಗವಾಗಿ ನಾಚಿಕೆ ಹೇಸಿಕೆಯೇನೂ ಇಲ್ಲದೆ ಮಾತಾಡುತ್ತಿದ್ದೇನೆ! ಭಾರತೀಯ ಸಂಸ್ಕೃತಿ ಇಳಿಮುಖವಾಗಿದೆಯೆನ್ನುವುದಕ್ಕೆ ಇದಕ್ಕಿಂತ ಸ್ಪಷ್ಟವಾದ ನಿದರ್ಶನ ಬೇಕೆ!

ಇದೇಕೆ ಹೀಗಾಯಿತು ? ನಾವು ಕೆಟ್ಟೆವೆ, ಅತಿಥಿಗಳ ಸ್ವಭಾವ ಬದಲಾಯಿಸಿ ಅವರು ನಮಗೆ ಬೇಡವಾದರೆ, ಅಥವಾ ಕಾಲ ಕೆಟ್ಟು ಹೋಯಿತು? ಈ ಮೂರು ಪ್ರಶ್ನೆಗಳಲ್ಲಿ ಮೊದಲನೆಯದಕ್ಕೆ ಸುಲಭವಾಗಿ ಉತ್ತರ ಕೊಡಬಹುದು... ನಾವು ಕೆಟ್ಟಿಲ್ಲ. ನಾವು ಅಭ್ಯಾಗತರಿಗಾಗಿ ಊರ ಬಾಗಿಲಿನಲ್ಲಿ ಕಾದು ನಿಲ್ಲದಿರಬಹುದು, ಆದರೆ ಬಂಧುಗಳ ಮತ್ತು ಮಿತ್ರ ಬರುವಿಕೆಯನ್ನು ಬಹುಶಃ ಹಿಂದಿಗಿಂತ ಹೆಚ್ಚಿನ ಸಂತೋಷದಿಂದಲೇ ಸ್ವಾಗತಿಸುತ್ತೇವೆ. ಹುಟ್ಟಿನಿಂದಲೇ ಜಿಪುಣರಾದವರ ಮಾತು ಬಿಡಿ, ಅಂಥವರು ಎಲ್ಲ ಕಾಲದಲ್ಲೂ ಇದ್ದರು. ಈಗಂತು ನಮ್ಮ ಬಂಧುಮಿತ್ರರು ದೆಹಲಿ, ಕಲ್ಕತ್ತ, ಬೊಂಬಾಯಿ, ಇಂಥ ಕಡೆಗಳಲ್ಲಿ ಹರಡಿಹೋಗಿದ್ದಾರೆ. ಅವರನ್ನು ವರ್ಷಕ್ಕೊಂದು ಸಲ ನೋಡುವುದೂ ಕಷ್ಟ. ಹೀಗಿರುವಾಗ ಅವರು ಮನೆಗೆ ಬಂದರೆ ನಮಗೆ ಆನಂದವಾಗುವುದೇನೂ ಆಶ್ಚರ್ಯವಲ್ಲ.

ಹಾಗಾದರೆ ಈಗಿನ ಅತಿಥಿಗಳ ಸ್ವಭಾವ ಬೇಸರವುಂಟುಮಾಡುವಂಥಾದ್ದೆ, ಇದನ್ನು ಒಪ್ಪುವಂತಿಲ್ಲ ? ಇದನ್ನು ಒಪ್ಪುವಂತಿಲ್ಲ. ಅತಿಥೇಯನಿಗೆ ತಮ್ಮಿಂದ ಎಷ್ಟು ಅನಾನುಕೂಲವಾಗುತ್ತದೆಯೋ ಎಂಬ ಯೋಚನೆ ಹಿಂದಿನವರಿಗಿಂತ ಈಗಿನವರನ್ನು ಹೆಚ್ಚು ಬಾಧಿಸುತ್ತದೆ. ಬಹುಮಟ್ಟಿಗೆ ಮನೆಗೆ ಬರುವ ಬಂಧು ಮಿತ್ರರೆಲ್ಲಾ ವಿಶ್ವಾಸಕ್ಕಾಗಿಯೇ ಬರುತ್ತಾರೆ. ಅವರ ನಡತೆಯಲ್ಲಿ ಬಿಗುಮಾನವೂ ಇರುವುದಿಲ್ಲ. ತಾವೆ ಅಡಿಗೆಯ ಮನೆಗೆ ಬಂದು, ನೆಲದ ಮೇಲೆಯೆ ಕುಳಿತು, ಕಾಫಿಯನ್ನು ಸಿದ್ಧಗೊಳಿಸಲು ನೆರವಾಗುವಷ್ಟು ಸರಳತೆಯಿಂದ ನಡೆದುಕೊಳ್ಳುತ್ತಾರೆ. ಒಂದು ವೇಳೆ ಮನೆಯಲ್ಲಿ ಹಾಲು ಇಲ್ಲದಿದ್ದರೆ ಅದನ್ನು ಈಗಿ ಅತಿಥಿಗಳ ಎದುರಿಗೆ ಹೇಳಿಕೊಳ್ಳುವುದಕ್ಕೆ ನಾವು ಸಂಕೋಚಪಡಬೇಕಾದ್ದಿಲ್ಲ. ಅವರೂ ಸಂಸಾರದ ಕಷ್ಟ ಸುಖಗಳನ್ನು ಬಲ್ಲವರು. ಅವರು ಬರುವುದು ಮರ್ಯಾದೆಗಾಗಿ ಅಲ್ಲ, ನಮ್ಮ ಸಹವಾಸ ಸೌಖ್ಯಕ್ಕಾಗಿ. ಅಂಥ ಅತಿಥಿಗಳು ಬಂದಾರೆ ಎಂದು ನಾವು ಕಾದಿರುತ್ತೇವೆ.

ಇನ್ನು ಉಳಿದಿರುವುದು ಕಾಲ... ಅದೇನೋ ಕೆಟ್ಟಿದೆಯೆನ್ನುವುದರಲ್ಲಿ ಸಂಶಯವಿಲ್ಲ. ಮಾನವ ತನ್ನಲ್ಲಿರುವ ಕುಂದುಕೊರತೆಗಳ ಜವಾಬ್ದಾರಿಯನ್ನು ಕಳೆದುಕೊಳ್ಳುವುದಕ್ಕೋಸ್ಕರ ಕಾಲವನ್ನು ಬಯ್ಯುವುದು ಬಹಳ ಹಿಂದಿನಿಂದಲ ಬಂದ ಅಭ್ಯಾಸ. ಅನೇಕ ವಿಧಗಳಲ್ಲಿ ಹಿಂದಿಗಿಂತ ಕಾಲ ಉತ್ತಮಗೊಂಡೇ ಇರಬಹುದು. ಆದರೆ ಅತಿಥಿ ಸತ್ಕಾರದ ದೃಷ್ಟಿಯಿಂದಲೇನೋ ಅದು ಕೆಟ್ಟಿದೆಯೆಂದೇ ತೋರುತ್ತದೆ. ಹಿಂದಿನ ಕಾಲದಲ್ಲಿ ನಾವು ಹಳ್ಳಿಗಳಲ್ಲಿದ್ದುಕೊಂಡು ಆರಂಬ ಮಾಡಿ ಜೀವನವನ್ನು ಸಾಗಿಸುತ್ತಿದ್ದೆವು. ಮಧ್ಯಮ ವರ್ಗದವರ ಮನೆಯಲ್ಲಿ ಸಾಧಾರಣವಾಗಿ ತಾವೇ ಬೆಳೆದ ದವಸ ಧಾನ್ಯಗಳು ತುಂಬಿರುತ್ತಿದ್ದವು, ನಾಲ್ಕಾರು ದನಗಳು ಇರುತ್ತಿದ್ದವು. ಹಾಲು ಮೊಸರು ತುಪ್ಪಗಳಿಗೆ ಅಷ್ಟೇನೂ ಅಭಾವವಿರುತ್ತಿರಲಿಲ್ಲ. ಪದಾರ್ಥಗಳ ಬೆಲೆ ಈಗಿನಂತೆ ದಿನದಿನಕ್ಕೂ ವಿಷ ಏರಿದಂತೆ ಏರುತ್ತಿರಲಿಲ್ಲ, ಅಲ್ಪ ಸ್ವಲ್ಪ ಏರಿದರೂ ಅದರ ಬಿಸಿ ಹಳ್ಳಿಯವರಿಗೆ ಅಷ್ಟಾಗಿ ತಟ್ಟುತ್ತಿರಲಿಲ್ಲ. ಅಂಗಡಿಯಿಂದ ಹಣ ಕೊಟ್ಟು ತರಬೇಕಾದ ಪದಾರ್ಥಗಳು ಹೆಚ್ಚಿರಲಿಲ್ಲ. ಉಪ್ಪು , ಸೀಮೆಯೆಣ್ಣೆಗಳೆರಡು ಹೊರತು ಉಳಿದುದೆಲ್ಲವನ್ನೂ ಭೂಮಿತಾಯಿ ಕೊಡುತ್ತಿದ್ದಳು. ಈಗಿನಂತೆ ಕಾಫಿಯ ಆವಾಂತರವೂ ಇರಲಿಲ್ಲ. ಅತಿಥಿಗಳಿಗೆ ಹಲಸಿನಕಾಯಿ ಬೇಳೆ ಹುಳಿಯ ಊಟ, ಉಪಹಾರಕ್ಕೆ ಹುಳಿಯವಲಕ್ಕಿ, ಬೆಲ್ಲ ಹುಣಿಸೆಯ ಹಣ್ಣಿನ ಪಾನಕ... ಇಷ್ಟೇ ಆತಿಥ್ಯ ನಡೆಸಿದರೆ ಮಾನಕ್ಕೆ ಕಡಿಮೆಯೆಂದು ಭಾವಿಸಬೇಕಾಗಿರಲಿಲ್ಲ. ಈಗ ಹಳ್ಳಿಗಳ ಜೀವನವೂ ಹಿಂದಿನಷ್ಟು ಸರಳವಾಗಿಲ್ಲ. ಆದರೆ ಈಗಲೂ ಅಲ್ಲಿಯ ಜನರು ಅತಿಥಿ ಸತ್ಕಾರಕ್ಕೆ ಹೆದರಬೇಕಾಗಿಲ್ಲ. ಏಕೆಂದರೆ ಹಳ್ಳಿಗಳಿಗೆ ಅತಿಥಿಗಳು ಬರುವುದೇ ಅಪರೂಪ. ಈಗಿನ ಪ್ರಯಾಣವೆಲ್ಲಾ ಹಳ್ಳಿಯಿಂದ ಪಟ್ಟಣಕ್ಕೆ, ಒಮ್ಮುಖದ ಪ್ರಯಾಣ. ಭೂಮಿ

ಕಾಣಿಗಳನ್ನು ನೋಡಿಕೊಂಡು ಹಳ್ಳಿಯಲ್ಲಿ ನೆಲಸಬಹುದಾದರೂ ಕೂಡ 'ಹಳ್ಳಿಗೆ ಹಿಂದಿರುಗಿ' ಎಂದು ಪ್ರಚಾರ ನಡೆಸುವುದಕ್ಕಾಗಿ ಪಟ್ಟಣಕ್ಕೆ ಓಡಿಬರುತ್ತಿದ್ದಾರೆ. ಆದ್ದರಿಂದ ಬೇಡದ ಅತಿಥಿಗಳ ಸಮಸ್ಯೆ ನಿಜವಾಗಿ ನೋಡಿದರೆ ಪಟ್ಟಣವಾಸದವರ ಸಮಸ್ಯೆಯೇ ಹೊರತು ಹಳ್ಳಿಗಾಡಿನವರದಲ್ಲ. ಪಟ್ಟಣದಲ್ಲಿ ಕೂಡ ಅದು ಮುಖ್ಯವಾಗಿ ಮಧ್ಯಮ ವರ್ಗದವರ ಸಮಸ್ಯೆ.

ಇಂದಿನ ಜೀವನದಲ್ಲಿ ಮುಖ್ಯವಾದ ವ್ಯವಹಾರವೆಲ್ಲಾ ನಡೆಯುವುದು ಪಟ್ಟಣದಲ್ಲಿ. ನಮ್ಮ ಜೀವನಕ್ರಮ ಬಹಳ ಜಟಿಲವಾದ್ದರಿಂದ 'ಪಟ್ಟಣದ ಗೋಜಿಗೆ ಹೋಗದೆ ನಮ್ಮ ಪಾಡಿಗೆ ನಾವು ಹಳ್ಳಿಯಲ್ಲಿರುತ್ತೇವೆ' ಎನ್ನುವಂತಿಲ್ಲ. ದೊಡ್ಡ ದೊಡ್ಡ ಕಾರ್ಖಾನೆಗಳೆಲ್ಲಾ ಇರುವುದು ಪಟ್ಟಣದಲ್ಲಿ... ಕೈಗಾರಿಕೆಗಳ ವಿಕೇಂದ್ರೀಕರಣವೇನಿದ್ದರೂ ವೇದಿಕೆಯ ಮೇಲಿನ ಭಾಷಣದಲ್ಲಿ ಮಾತ್ರ ಕಂಡುಬರುತ್ತದೆ. ಮುಖ್ಯವಾದ ಕೋರ್ಟು ಕಚೇರಿಗಳಿರುವುದೂ ಪಟ್ಟಣದಲ್ಲಿ, ಮಂತ್ರಿಗಳು, ದೊಡ್ಡ ದೊಡ್ಡ ಅಧಿಕಾರಿಗಳು, ಇರುವುದೂ ಅಲ್ಲಿಯೇ. ಮೇಲ್ಪಟ್ಟದ ವಿದ್ಯಾ ಶಾಲೆಗಳೂ ಆಸ್ಪತ್ರೆಗಳೂ ಇರುವುದು ಸಂಪೂರ್ಣವಾಹಿಯಲ್ಲದಿದ್ದರೂ ಬಹುಮಟ್ಟಿಗೆ ಪಟ್ಟಣದಲ್ಲೇ. ಆದ್ದರಿಂದ ಪಟ್ಟಣ ಎಲ್ಲ ಕಡೆಗಳಿಂದಲೂ ಜನರನ್ನು ಸೆಳೆಯುತ್ತಿದೆ. ಕೋರ್ಟಿನ ಹಿಯರಿಂಗಿಗಾಗಿ ಬರುವವರು, ಮಗನಿಗೆ ಯಾವುದಾದರೂ ಕಾಲೇಜಿನಲ್ಲಿ ಸೀಟು ದೊರಕಿಸಿಕೊಳ್ಳಲು ಬರುವವರು, ಮಂತ್ರಿಗಳನ್ನು ಭೇಟಿಮಾಡಲು ಬರುವವರು, 'ಯಾರಾದರೂ ಪುಢಾರಿಗೆ ಹೇಳಿ ನಮ್ಮ ಕೆಲಸ ಸಾಧಿಸಿಕೊಡಿ' ಎಂದು ಕೇಳಲು ಬರುವವರು, ಆಸ್ಪತ್ರೆಯಲ್ಲಿ ಎಕ್ಸ್‌ರೇ ಚಿತ್ರವನ್ನು ತೆಗೆಸಲು ಬರುವವರು, ... ಈ ಪ್ರವಾಹಕ್ಕೆ ಕೊನೆಮೊದಲಿಲ್ಲ. ಈ ಜನರೆಲ್ಲಾ ಎಲ್ಲಿ ತಂಗಬೇಕು ಹೋಟೆಲುಗಳೇನೋ ಇವೆ. ಆದರೆ ಅಲ್ಲಿ ತೆರಬೇಕಾದ ಹಣ ಬಹಳ ಹೆಚ್ಚು. ಹೋಟೆಲಿನ ಯಜಮಾನ ಒಂದು ಜೀವಮಾನದಲ್ಲಿ ಹದಿನೈದು ಇಪ್ಪತ್ತು ಲಕ್ಷ ರೂಪಾಯಿಗಳನ್ನಾದರೂ ಗಳಿಸಬೇಕಷ್ಟೆ ! ಹಳ್ಳಿಗಳಿಂದ ಬರುವ ಜನಕ್ಕೆ ಹಣ ಖರ್ಚು ಮಾಡುವ ಅಭ್ಯಾಸವಿಲ್ಲ. ಆದ್ದರಿಂದ ಅವರು ನಿಮ್ಮ ಮನೆಗೇ ಬರುತ್ತಾರೆ. 'ಹೋಟೆಲಿನ ಊಟ, ನೋಡಿ, ಎಷ್ಟಾದರೂ ಒಗ್ಗುವುದಿಲ್ಲ. ನಿಮ್ಮನ್ನೆಲ್ಲಾ ನೋಡಿ ಬಹಳ ದಿನವಾಯಿತು. ಯೋಗಕ್ಷೇಮವನ್ನು ವಿಚಾರಿಸಿದ ಹಾಗೂ ಆಗುತ್ತೆ ಅಂದುಕೊಂಡು ಇಲ್ಲಿಗೇ ಬಂದು ಬಿಟ್ಟೆ' ಎನ್ನುತ್ತಾರೆ. ಇವರಲ್ಲಿ ಅನೇಕರು ನಿಮ್ಮ ಬಂಧುಮಿತ್ರರ ವರ್ಗಕ್ಕೆ ಸೇರಿದವರಲ್ಲ, ಅಲ್ಪಸ್ವಲ್ಪ ಪರಿಚಯವುಳ್ಳವರು ಮಾತ್ರ. ಆದರೂ ನೀವು 'ಅಯ್ಯೋ, ಹಾಗಂದರೇನು, ನಾವು ಇಲ್ಲಿ ಇರುವಾಗ ನೀವು ಹೋಟೆಲಿಗೆ ಹೋಗೋಣ ಅಂದರೇನು, ಎಲ್ಲಾದರೂ ಉಂಟೆ !' ಎನ್ನುತ್ತಾ ಅವರನ್ನು ಸ್ವಾಗತಿಸಲೇಬೇಕು... ಪಟ್ಟಣಕ್ಕೆ ಬಂದು ನೆಲಸಿದ್ದಕ್ಕೆ ನೀವು ಕೊಡಬೇಕಾದ ಕಾಣಿಕೆ, ಅದು.

ಈ ಬಗೆಯ ಅಭ್ಯಾಗತರೂ ನಮ್ಮ ಮೇಲಿನ ವಿಶ್ವಾಸಕ್ಕಾಗಿಯೇ ಬರುತ್ತಾರೆ ಎಂದಿಟ್ಟುಕೊಳ್ಳೋಣ. ಅದು ನಿಜವಾದರೆ ಅವರನ್ನು 'ಬೇಡದ ಅತಿಥಿಗಳು' ಎನ್ನಲಾಗುವುದಿಲ್ಲ. ಆದರಕ್ಕೆ ಪ್ರತಿಯಾಗಿ ಆದರ ತೋರಿಸುವುದು ನಮ್ಮ ಕರ್ತವ್ಯ. ಆದರೆ ಮನೆಯಲ್ಲಿ ತಕ್ಕಡಿ ಸರಿಯಾಗಿ ತೂಗಬೇಕಲ್ಲ ! ಸರ್ಕಾರದವರು ಅತಿಥಿ ಸತ್ಕಾರಕೆಂದು ನಮಗೇನಾದರೂ ವಿಶೇಷ ಭತ್ಯ ಕೊಡುತ್ತಾರೆಯೆ? ಅಲ್ಲದೆ ಅವರ ಉಪಚಾರವನ್ನು ನೋಡಿಕೊಳ್ಳುವವರು ಯಾರು? ಮನೆಯವರ ಯೋಗಕ್ಷೇಮ ನೋಡಿಕೊಳ್ಳುವವರು ಯಾರು? ಗೃಹಿಣಿಗೆ ಮನೆಯವರ ಯೋಗಕ್ಷೇಮ ನೋಡಿಕೊಳ್ಳುವುದೇ ಸಾಕಾಗಿ ಹೋಗುತ್ತದೆ. ನೀವು ಒಂಬತ್ತು ಘಂಟೆಯ ಹೊತ್ತಿಗೇ ಆತುರದಲ್ಲಿ ಎರಡು ತುತ್ತು ಅನ್ನವನ್ನು ನುಂಗಿ ಕಚೇರಿಗೆ ಓಡಬೇಕು. ನಿಮ್ಮ ಮಕ್ಕಳು ಶಾಲೆಗೆ ಓಡಬೇಕು. ಇನ್ನು ಅಭ್ಯಾಗತರಿಗೆ ಸ್ನಾನಕ್ಕೆ ನೀರು ಸಿದ್ಧಮಾಡುವವರು ಯಾರು? ಗಾಡಿ ತರಿಸಿಕೊಡುವವರು ಅಥವಾ ಬಸ್ ಸ್ಟಾಂಡ್ ತೋರಿಸುವವರು ಯಾರು ? ಅದರ ಮೇಲೆ ಎಷ್ಟು ಜನಕ್ಕೆ ಸತ್ಕಾರ ಮಾಡುವುದು ಸಾಧ್ಯ? ಯಾವ ಪದಾರ್ಥವೇ ಆಗಲಿ, ಕೇಳಿಕೆಗಿಂತ ಸರಬರಾಜು ಹೆಚ್ಚಾದರೆ 'ಡಿಮಾಂಡ್'ಗಿಂತ 'ಸಪ್ಲೈ' ಹೆಚ್ಚಾದರೆ ಅದು ಬೇಡದ ವಸ್ತುವಾಗುತ್ತದೆ. ಇದು ಅರ್ಥಶಾಸ್ತ್ರವು ಖಚಿತವಾಗಿ ತೋರಿಸಿ ಕೊಟ್ಟಿರುವ ನಿಯಮ. ಈಗ ಅತಿಥಿಗಳು ಬೇಡವಾಗಿರುವುದಕ್ಕೆ ಒಂದು ಕಡೆ ಪದಾರ್ಥಗಳ ಬೆಲೆ ಹೆಚ್ಚಿರುವುದು ಮತ್ತು ಅವುಗಳ ಅಭಾವ ಕಾರಣವಾದರೆ ಮತ್ತೊಂದು ಕಡೆ ಅತಿಥಿಗಳ 'ಸಪ್ಲೈ' ಹೆಚ್ಚಿರುವುದೂ ಕಾರಣ.

ಔತಣ ಕೊಟ್ಟು ನಮಗೆ ಇಷ್ಟರಾದವರನ್ನು ಬರಮಾಡಿಕೊಳ್ಳುವುದರಲ್ಲಿ ನಿಸ್ಸಂದೇಹವಾಗಿ ಆನಂದವುಂಟು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಔತಣ ಕೊಡುವ ಚೈತನ್ಯ ಬಹು ಜನರಲ್ಲಿ ಉಡುಗಿ ಹೋಗಿದೆ. ಈಗ ಮನೆಗೆ ಬರುವ ಅತಿಥಿಗಳಲ್ಲಿ ಔತಣವಿಲ್ಲದೆ ಬರುವವರೇ ಹೆಚ್ಚು. ಆದರೆ ಅದಲ್ಲ, ಅವರು ಬೇಡವಾಗುವುದಕ್ಕೆ ಕಾರಣ. ಕೆಲವು ವೇಳೆ ಔತಣವಿಲ್ಲದೆ ಬರುವ ಅತಿಥಿಗಳೇ ಹೆಚ್ಚು ಪ್ರಿಯರಾಗುತ್ತಾರೆ. ಹಿಂದೊಂದು ಸಾರಿ ನನ್ನ ಮಿತ್ರರೊಬ್ಬರು ನಾಲ್ಕಾರು ಗೆಳೆಯರನ್ನು ಊಟಕ್ಕೆ ಕರೆದಿದ್ದರು. ತಮ್ಮಲ್ಲಿ ವಿಶೇಷ ವಿಶ್ವಾಸವಿಟ್ಟಿದ್ದ ಗುರುಗಳೊಬ್ಬರನ್ನು ಮಾತ್ರ ಯಾವುದೋ ಕಾರಣಕ್ಕಾಗಿ ಕರೆದಿರಲಿಲ್ಲ. ಇನ್ನೇನು ಊಟಕ್ಕೆ ಏಳಬೇಕು ಎನ್ನುವ ಸಮಯದಲ್ಲಿ ಆಕಸ್ಮಾತ್ತಾಗಿ ಆ ಹಿರಿಯರು ಅಲ್ಲಿಗೆ ಬಂದು ನಾವೆಲ್ಲಾ ಸೇರಿದ್ದದ್ದನ್ನು ಕಂಡರು. ಬಿಟ್ಟಿ ರಸದೂಟವನ್ನು ಗಿಟ್ಟಿಸುವವರ ಮುಖದ ಮೇಲೆ ಮಾತ್ರ ಕಾಣಬಹುದಾದ ಕಳೆ ನಮ್ಮ ಮುಖದಲ್ಲಿ ತೇಲುತ್ತಿದ್ದಿರಬೇಕು. ಅವರು 'ಓಹೋ, ನನ್ನನ್ನು ಬಿಟ್ಟು ಊಟಕ್ಕೆ ಏರ್ಪಾಡು ಮಾಡಿರುವ ಹಾಗೆ ಕಾಣುತ್ತೆ. ಅದೆಲ್ಲಾ ನಡೆಯುವುದಿಲ್ಲ!' ಎಂದು ನಗುತ್ತಾ ಹೇಳಿ ತಾವೂ ಊಟಕ್ಕೆ ನಿಂತರು. ಅವರ ಸೌಜನ್ಯವನ್ನೂ ದೊಡ್ಡತನವನ್ನು ಕಂಡು ನನ್ನ ಮಿತ್ರರಿಗೆ ಆದ ಸಂತೋಷ ಹೇಳತೀರದು. ಅವೊತ್ತು ಔತಣವಿಲ್ಲದವರೇ ಎಲ್ಲರಿಗಿಂತಲೂ ಹೆಚ್ಚು ಪ್ರಿಯರಾದ ಅತಿಥಿಯಾದರು.

ಔತಣವಿಲ್ಲದವರು ಹೇಗೆ ಬೇಕಾಗಬಹುದೋ ಹಾಗೆಯೇ ಔತಣವುಳ್ಳವರು ಬೇಡವಾಗಬಹುದು. ಮಾಘ ಫಾಲ್ಗುಣ ಮಾಸಗಳಲ್ಲಿ ನಿಮ್ಮ ಮನೆಗೆ ನೂರಾರು 'ವಿವಾಹ ಮಹೋತ್ಸವಾಹ್ವಾನ ಪತ್ರಿಕೆ'ಗಳು ಬರುತ್ತವೆ. 'ಅವನ್ನು ಕಳಿಸುವವರು' ಕುಟುಂಬ ಪರಿವಾರ ಸಮೇತರಾಗಿ ಎರಡು ದಿನ ಮುಂಚಿತವಾಗಿ ದಯಮಾಡಿಸಿ ವಧುವರರನ್ನೂ ಆಶೀರ್ವದಿಸಿ ನನ್ನ ಮನಸ್ಸಂತೋಷಪಡಿಸಬೇಕಾಗಿ ಬೇಡುತ್ತೇನೆ, ಎಂದು ಆಹ್ವಾನ ಕೊಟ್ಟಿರುತ್ತಾರೆ. ಆ ಲಗ್ನ ಪತ್ರಿಕೆಗಳೆಲ್ಲಾ ಮನಃಪೂರ್ವಕವಾಗಿ ನಿಮಗೆ ಕೊಟ್ಟ ಆಹ್ವಾನ ಎಂಬ ಭ್ರಮದೆ ತುತ್ತಾಗಬೇಡಿ. ಅವುಗಳಲ್ಲಿ ಮುಕ್ಕಾಲು ಮೂರು ವೀಸೆ ಪಾಲು ಕೇವಲ ಋಣಮರ್ಯಾದೆಗಾಗಿ. 'ನಾನು ಸಾವಿರ ಲಗ್ನ ಪತ್ರಿಕೆಗಳನ್ನು ಅಚ್ಚು ಹಾಕಿಸಬೇಕಾಯಿತು' ಎಂದು

(ಪು: 12ಕ್ಕೆ)

# 'ರೆಕ್ಕೆಗಳು ಪುಕ್ಕಗಳು'

— ಕೆ. ತಾರಾ ಭಟ್, ಬೆಂಗಳೂರು.

ಸುಮಾರು ಹದಿನೈದು ವರುಷಗಳ ಹಿಂದೆ ನಾನು ಬೆಂಗಳೂರಿಗೆ ಬಂದಾಗ ನಗರ ಸೌಂದರ್ಯ ನೋಡಿಯೇ ಆನಂದಗೊಂಡಿದ್ದೆ, 'ಆಹ್ ! ಎಂತಹ ಸುಂದರ ನಗರ! ಇದು ನಮ್ಮ ಕರ್ನಾಟಕದ ರಾಜಧಾನಿ' ಎಂದು ಬೀಗಿ ಹೋಗಿದ್ದೆ. ರಸ್ತೆಯ ಇಕ್ಕೆಡೆಗಳಲ್ಲೂ ಬೃಹತ್ ಮರಗಳ ಸಾಲು ಸಾಲು, ಅದರ ಮೇಲೆ ಸದಾ ಚಿಲಿಪಿಲಿ ಗುಟ್ಟುವ ಹಕ್ಕಿಗಳ ಹಾರಾಟ, ಆಹ್ಲಾದಕರ ಹವೆ, ಸುಂದರವಾದ ಹಳೆ ಶೈಲಿಯ ಮನೆಗಳು, ಸ್ವಚ್ಛವಾಗಿ ಸದಾ ಬೀಸುವ ಗಾಳಿ ತೊನೆದಾಡುವ ಹೂಗಳು. ಎಲ್ಲಿ ನೋಡಿದರಲ್ಲಿ ಕೆರೆಗಳು ಎಲ್ಲಾ ವರ್ಗದ ಜನರಿಗೂ ವಾಸವಾಗಿರಲು ಅನುಕೂಲಕರವಾದ ನಗರ ಅನಿಸಿತ್ತು. ಉದ್ಯಾನವನ ನಗರವೆಂದು ಹೆಸರಿಗೆ ತಕ್ಕ ಹಾಗೆಯೇ ಇತ್ತು. ಎಲ್ಲಕ್ಕಿಂತ ನನಗೆ ಹೆಚ್ಚು ಖುಷಿಯಾಗಿದ್ದು ಅಗ್ಗದಲ್ಲಿ ಸಿಗುವ ಇಲ್ಲಿಯ ತರಕಾರಿಗಳು ಮತ್ತು ತರಕಾರಿ ಮಾರುವ ಹೆಂಗಳೆಯರು ತೋರಿಸುವ ಸೌಜನ್ಯ 'ಬನ್ನಿ ಅಮ್ಮಣ್ಣಿ; ಬನ್ನಿ ಎಂದು ಕರೆಯುವ ಅವರ ಸಂಭೋದನೆ ಒಳಗೊಳಗೇ ಖುಷಿ ಕೊಡುತ್ತಿತ್ತು. ಕೆಲವು ಸಾಮಾನ್ಯ ಶಬ್ದಗಳೂ ನಮಗೇ ಆಶ್ಚರ್ಯವಾಗುವಂತೆ ಒಂದು ಸಂಸ್ಕೃತಿಯ ಇತಿಹಾಸದ ಬಗ್ಗೆ ತೆರೆದು ತೋರಿಸುತ್ತದೆ. ಈ 'ಅಮ್ಮಣ್ಣಿ' ಎಂದು ಕರೆಯುವ ಸಂಭೋದನೆಯಲ್ಲೇ ಏನೋ ಒಂದ ಗೌರ ಭಾವ ತೆರೆದು ತೋರಿಸುತ್ತದೆ. ಅದು ಚಿಕ್ಕವರಿಗೆ ಪ್ರೀತಿಯಿಂದ ಹಸುಳೆ ಎಂದು ಕರೆಯುವ ಖ್ಯಾತಿ ಪದವಾಗಿಯೂ ದೊಡ್ಡವರಿಗೆ ಗೌರವ ತೋರಿಸುವ ಮಾದರೆ ಆಗಿಯೂ ಬರುತ್ತದೆ. ಕನ್ನಡ ಭಾಷೆಯ ಪ್ರಿಯ ಪರಂಪರೆಯನ್ನೇ ಇದು ತೋರಿಸುತ್ತದೆ. ಆದರೆ ಇಂದು ಕನ್ನಡದ ಅಂತಹ ಶಬ್ದ ಪರಂಪರೆಯೇ ನಿರ್ನಾಮವಾಗಿ ಹೋಗಿದೆ. ಅದರ ಸ್ಥಾನದಲ್ಲಿ ಇಂದು ಎಲ್ಲೆಲ್ಲೂ ಹಾವಳಿ ಮಾಡುತ್ತಿರುವ 'ಆಂಟೀ' ಎಂದು ಕರೆಯುವ ಇಂಗ್ಲೀಷ ಶಬ್ದ. ಈ ಶಬ್ದ ಮತ್ತು ಅದನ್ನು ಗ್ರಹಿಸುವ ಕ್ರಮ ಎಷ್ಟೊಂದು ಅನಾಕರ್ಷಕತೆ ಹುಟ್ಟಿಸುತ್ತದೆ ಎಂಬುದನ್ನು ಇತ್ತೀಚೆಗೆ ಮಹಿಳಾ ಪಬ್ಲೀಷರ್ ಪ್ರತಿಕ್ರಿಯಿಸಿದ ರೀತಿಯಿಂದಲೇ ತಿಳಿದು ಬರುತ್ತದೆ. ಪುಸ್ತಕ ಬಿಡುಗಡೆಯ ಸಮಾರಂಭ ಒಂದರಲ್ಲಿ ಆ ಪ್ರಕಾಶಕಿ ಲೇಖಿಕಿ ಬಗ್ಗೆ ವಿವರಿಸುತ್ತಾ ಸಾಕಷ್ಟು ಹಿರಿಯಳಾದ ಈ ಲೇಖಿಕಿ ತನ್ನಲ್ಲಿ ಬಂದು 'ಆಂಟೀ ! ನನ್ನ ಪುಸ್ತಕವನ್ನು ಪ್ರಕಟಿಸುತ್ತೀರಾ ಎಂದು ಕೇಳಿದಾಗ ನಾನು ಅವರ ಆಂಟಿಯಾಗಿ ಅವರ ಪುಸ್ತಕ ಪ್ರಕಟಿಸಿದೆ' ಎಂದು ಹೇಳಿದ್ದರು. ನಾವು ನಿಮಗಿಂತ ಕಿರಿಯರು ಎಂದು ತೋರಿಸಿಕೊಳ್ಳುವ ಮೋಹ ಕೆಲವರಲ್ಲಿ ತೀವ್ರವಾಗಿಯೇ ಕಾಡುತ್ತಿರಬೇಕು. ಇಂತಹ ಇಂಗ್ಲೀಷ ಸಂಭೋದನೆಯ ಮೋಹ ನಮ್ಮ ಪ್ರಿಯವಾದ ಭಾವನೆಗಳನ್ನೇ ಹೇಗೆ ಮುರುಟಿಸಿ ಬಿಡುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ಅಪಾರ ಸಂಖ್ಯೆಯಲ್ಲಿ ಹೊರಗಿನವರು ಬೆಂಗಳೂರಿನಲ್ಲಿ ಧಾಳಿ ಇಟ್ಟು ಸ್ವಂತ ಆಸ್ತಿ ಮಾಡಿ ನೆಲೆಯಾರಿದ ಕಾರಣ ಇಲ್ಲಿಯ ಕನ್ನಡಿಗರು ಇಲ್ಲಿಯೂ ಪರಕೀಯರಾಗುತ್ತಾ ಇಲ್ಲಿಂದ ಕಾಲುಕೀಳುವ ಪರಿಸ್ಥಿತಿ ಬಂದು ಬಿಟ್ಟಿದೆ. ಎರಡೇ ದಶಕದಲ್ಲಿ ನಗರದ ಮೂಲ ಚಿತ್ರಣವನ್ನೇ ಬದಲಾಯಿಸುತ್ತಾ ಇಂಗ್ಲೀಷ ಭಾಷೆಯೇ ಎಲ್ಲಾ ಕಡೆ ಸಾರ್ವಭೌಮತ್ವ ಪಡೆಯುತ್ತಾ ಈ ಭಾಷೆ ಮಾತನಾಡುವವರ ಮಾತ್ರ ಎಲ್ಲಾ ಕ್ಷೇತ್ರಗಳಲ್ಲೂ ಸಲ್ಲುವವರು ಎಂಬ ಭ್ರಮೆ ಹುಟ್ಟಿಸಿ ಬಿಟ್ಟಿದೆ.

ನಮ್ಮ ಚರಿತ್ರೆಗೆ ಹೊಸ ತಿರುವು ಕೊಡುತ್ತಿರುವ ಘಟನೆಗಳಲ್ಲಿ ಚುನಾವಣೆಯಂತಹ ಸಂಗತಿಗಳೂ ಮುಖ್ಯವೆಂದು ನನ್ನ ಅನಿಸಿಕೆ. ಇಂತಹ ಸಮಯದಲ್ಲೇ ಅನೇಕ ಘಟನೆಗಳು ನಡೆಯುವುದರಿಂದ ಇದರಿಂದಾಗಿ ಬೇರೆಯೇ ಆದ ಸತ್ಯಗಳನ್ನು ಕಾಣಲಿಕ್ಕೆ ಸಾಧ್ಯವಾಗುತ್ತದೆ. ಈಗಿನ ಚುನಾವಣೆಗಳು ಒಂದು ಕಡೆ ಪ್ರಜಾಪ್ರಭುತ್ವವನ್ನು ಅಣಕಿಸುತ್ತಾ ಅಜ್ಞಾನದ ಪರಮಾವಧಿಯನ್ನು ನಗ್ನವಾಗಿ ಪ್ರದರ್ಶಿಸುತ್ತದೆ. ರಾಜಕೀಯ ಅಧಿಕಾರದ ಸ್ಪರ್ಧೆಯಲ್ಲಿ ಜನರ ಆಸೆ, ಆಕಾಂಕ್ಷೆ ಮೂಲೆ ಗುಂಪಾಗಿ ಯಾವುದೇ ಸಿದ್ಧಾಂತಗಳೂ ಅಳಿಸಿಯೇ ಹೋಗಿ ಬಿಡುತ್ತದೆ. ಎಲ್ಲಾ ರೀತಿ ರಾಜಕಾರಣಿಗಳೂ, ಸಿನೇಮಾ ತಾರೆಗಳೂ ಚುನಾವಣಾ ಸಮಯದಲ್ಲೇ ನೋಡಲು ಸಿಗುವುದರಿಂದ ಜನ ಸಮುದಾಯದಲ್ಲಿ ಒಂದು ರೀತಿಯ ಉತ್ಸಾಹ ಚುನಾವಣೆ ಕಟ್ಟಿ ಕೊಡುತ್ತದೆ. ತಮ್ಮ ಸಂಕಟಗಳನ್ನೆಲ್ಲಾ ನಿವಾರಿಸಿಕೊಳ್ಳಲು ಇದೇ ತಕ್ಕಕಾಲ ಎಂದು ಜನರಲ್ಲಿ ಉತ್ಸಾಹ ಪುಟಿಗೊಳ್ಳುತ್ತದೆ. ಸತ್ಯವೇ ಇಲ್ಲ ದಿನಗಳಲ್ಲಿ ಈ ಚುನಾವಣೆಗಳೇ ಒಂದು ಜನಾಕರ್ಷಕ ಘಟನೆ. ರಸ್ತೆಯ ಬದಿಯಲ್ಲಿ ನೀರುಳ್ಳಿ ಬಜೆ ಮತ್ತು ಉದ್ದಿನವಡೆ ಮಾರುವ ತಿಮ್ಮಕ್ಕ ಮತ್ತು ವೆಂಕಿಗೆ ಈ ಚುನಾವಣೆಯಲ್ಲಿ ಆದಷ್ಟು ಹೆಚ್ಚು ವ್ಯಾಪಾರ ಮಾಡಿ ಕೊನೇಪಕ್ಷ 25.000ವಾದರೂ ಲಾಭಗಳಿಸಬೇಕೆಂಬ ಹುಮ್ಮಸ್ಸು. ಊರಿನ ಎಲ್ಲಾ ನೆಂಟರಿಷ್ಟರು ಬಂಗಳೂರಿನ ಪಕ್ಷದ ಕಛೇರಿ ಮುಂದೆ ಡೀಢೀರಾಗಿ ರಾತ್ರಿ ಹಗಲು ಅವರ ವಡೆ ಅಂಗಡಿ ತೆರೆದು ರೆಡಿ ಮಾಡಿದ್ದಾರೆ. ಬೀದಿ ವ್ಯಾಪಾರಿಗಳ ತಮ್ಮ ತಮ್ಮ ಅಂಗಡಿಗಳ ಸ್ಥಳವನ್ನು ಆಕ್ರಮಿಸಲು ಇಲ್ಲೊಂದು ರೀತಿಯ ಇನ್ನೊಂದು ಯುದ್ಧವೇ ಶುರು ಆಗುತ್ತದೆ. ಆರೆ ಬರೆ ಹೊಟ್ಟೆಗಳ ಬಡ ಜನರ ಅವರ ಮುಗ್ಧ ಉತ್ಸಾಹದ ಹಿಂದೆ ಅವರ ಬದುಕಿನ ಹೀನತೆ, ಅವರ ಪರಿಸ್ಥಿತಿ ಇದೆಲ್ಲಾ ನೋಡಿದಾಗ ತಮ್ಮ ಅಜ್ಞಾನ ತೊಡೆಯಲು ಇವರು ಎಷ್ಟೊಂದು ದೀರ್ಘ ದಾರಿ ಸವೆಸಬೇಕಾಗಿದೆ ಎಂದು ದುಃಖ ಆಗುತ್ತದೆ.

●

## ಬಾಳ್ವೆಗೆ ಬೆಳಕಾದ ಸಾಹಿತಿ - ಪ್ರೊ. ಎ. ಎನ್. ಮೂರ್ತಿರಾವ್

(ಪುಟ 4ರಿಂದ)

ಹೊಡುವುದಕ್ಕೂ ಅವಶ್ಯಕವಾದಾಗ ಗೂಂಡಾಗಿರಿ ಮಾಡುವುದಕ್ಕೂ ಜನರಿಗೆ ಲಂಚಕೊಟ್ಟು ಅವರನ್ನು ಕಳಿಹಾಕಬೇಕು. ದೇಶ ಸೇವೆಗೆ ಕಾಲವನ್ನು ಎಲ್ಲಿಂದ ತರೋಣ' ಎಂದು ನಮ್ಮ ರಾಜಕಾರಣಿಗಳು ಮಾಡುತ್ತಿರುವ ಕಸರತ್ತುಗಳನ್ನು ಮುಲಾಜಿಲ್ಲದೆ ತರಾಟೆಗೆ ತೆಗೆದುಕೊಂಡಿದ್ದಾರೆ. ಅಲ್ಲದೇ ಸ್ವಾತಂತ್ರ್ಯ ಎನ್ನುವುದು ಉಪ್ಪು ಹುಳಿ ಖಾರ ಬೆರಸಿ ನಾಲಿಗೆಯ ಹೊರಳಿಸಿ ಸವಿಯಬಹುದಾದ ವಸ್ತುವಲ್ಲ. ಅದು ಗುರಿಯಲ್ಲ; ಸಾಧನವಾದಾಗ' ಎಂಬ ಎಚ್ಚರಿಕೆಯನ್ನು ಸಹ ನೀಡಿದ್ದಾರೆ. ಡಾ. ಮೂರ್ತಿರಾಯರ ಪರಿಪಕ್ವತೆ ಅವರ ಸಾಹಿತ್ಯದಲ್ಲಿ ಕಾಣುತ್ತದೆ. ನಿತ್ಯ ಜೀವನದಲ್ಲಿ ಕಾಣುತ್ತದೆ. ಇತರರೊಡನೆ ನಡೆದುಕೊಳ್ಳುವ ರೀತಿಯಲ್ಲಿ ಕಾಣುತ್ತದೆ. ಜೀವನದ ಗಂಭೀರ ಅನುಭವಗಳು ಸಾಮಾನ್ಯ ಅನುಭವಗಳು ಇವುಗಳಿಗೆ ಅವರು ತೋರಿಸುವ ಪ್ರತಿಕ್ರಿಯೆಯಲ್ಲಿ ಕಾಣುತ್ತದೆ.

ಡಾ. ಎ. ಎನ್. ಮೂರ್ತಿರಾಯರು ಕನ್ನಡ ಸಾರಸ್ವತ ಲೋಕದ ಹಿರಿಯರಲ್ಲಿ ಒಬ್ಬರು. ಯಾವ ಪೂರ್ವಗ್ರಹಗಳಿಗೆ ಸಹಜವಾಗಿ ಸ್ಪಂದಿಸುವ ಅವರ ಬರವಣಿಗೆಯಲ್ಲಿ ಜೀವಂತ ಲೋಕ ದೃಷ್ಟಿಯನ್ನು ಕಾಣಬಹುದಾಗಿದೆ. ನಮ್ಮ ನಡುವೆ ಇರುವ ನಮ್ಮ ಬಾಳ್ವೆಗೆ ಬೆಳಕಾದ ಈ ಸಾಹಿತಿ ಇನ್ನಷ್ಟು ಕಾಲ ಬದುಕಿಬಾಳಲಿ ಎಂದು ಈ ಸಂದರ್ಭದಲ್ಲಿ ಹಾರೈಸೋಣ.

●

# ಮೈಸೂರು ಅಸೋಸಿಯೇಷನ್ನಿನ ರಂಗಮಂಟಪ ಉದ್ಘಾಟನೆ



ಗಣಹೋಮ

ಮೈಸೂರು ಅಸೋಸಿಯೇಷನ್ನಿನಲ್ಲಿ ಇದೇ ಕಟ್ಟಿ ಮುಗಿಸಿದ ನೂತನ ರಂಗಮಂಟಪದ ಉದ್ಘಾಟನಾ ಸಮಾರಂಭ ತಾ. 16-9-1999ರಂದು ನಡೆಯಿತು. ಅಂದು ಬೆಳಿಗ್ಗೆ ಗಣಪತಿಹೋಮ ಪುಣ್ಯಾಹ, ವಾಸ್ತುಹೋಮ ನವಗ್ರಹಪೂಜೆ, ಪೂರ್ಣಾಹುತಿ ಇವುಗಳನ್ನು ಮುಗಿಸಿ ಗಣಪತಿಗೆ ಮಹಾಮಂಗಳಾರತಿಯ ನಂತರ ಪ್ರಸಾದ ವಿನಿಯೋಗವಾಯ್ತು. ಸಂಜೆ 6 ಘಂಟೆಗೆ ಅಸೋಸಿಯೇಷನ್ನಿನ ಪರಂಪರೆಗನುಸಾರವಾಗಿ ಅಸೋಸಿಯೇಶನ್ನಿ ಹಿರಿಯ ಸದಸ್ಯರು ಹಾಗೂ ಅಮೂಲ್ಯ ಸೇವೆ ಸಲ್ಲಿಸಿರುವ ಶ್ರೀಯುತ ಸಂಜೀವರಾಯರು (ಮಾಜಿ ಅಧ್ಯಕ್ಷರು) ಹಾಗೂ ಶ್ರೀ ಚಂಪಕ್‌ನಾಥ್ (ಮಾಜಿ ಅಧ್ಯಕ್ಷರು) ಶ್ರೀಮತಿ ಶಾರದಮ್ಮನಾರಾಯಣ ಸ್ವಾಮಿ ಇವರುಗಳನ್ನು ಸನ್ಮಾನಿಸಲಾಯ್ತು. ಶ್ರೀ ಚಂಪಕ್‌ನಾಥ್‌ರವರು ಲಿಫ್ಟನ್ನು ಉದ್ಘಾಟಿಸಿದರು. ರಂಗಮಂಟಪದ ಉದ್ಘಾಟನೆಯನ್ನು ಶ್ರೀ ಸಂಜೀವರಾಯರು ಉದ್ಘಾಟಿಸಿದರು. ಅಸೋಸಿಯೇಷನ್ನಿನ ಹಿರಿಯ ಕಲಾವಿದೆಯಾದ ಶ್ರೀಮತಿ ಸೀತಮ್ಮ ರಾವ್‌ರವರು ರಂಗಪೂಜೆ ನೆರವೇರಿಸಿದರು. ಶ್ರೀಮತಿ ಶಾರದಮ್ಮ ನಾರಾಯಣ ಸ್ವಾಮಿಯವರು ಬಟನ್ ಒತ್ತಿ ರಂಗ ಮಂಚದ ಉದ್ಘಾಟನೆ ನೆರವೇರಿಸಿದರು. ರಂಗಮಂಚದ ಮೇಲೆ ನಾಲ್ಕು ಜನ ಸದಸ್ಯರುಗಳು ಗಣಪತಿಯ ಪೂಜೆ ಮಾಡಿ ಜ್ಯೋತಿ ಬೆಳಗಿಸಿದರು.

ಈ ಸನ್ನಿವೇಶದಲ್ಲಿ ಡಾ. ಮಂಜುನಾಥ್‌ರವರು ಮಾತನಾಡುತ್ತಾ 25 ವರ್ಷಗಳ ಕನಸು ಇಂದು ನನಸಾಗಿದೆ. ಸುಸ್ಥಿತವಾದ ರಂಗ ಮಂಟಪ ಸಿದ್ಧವಾದದ್ದು ಸದಸ್ಯರಿಗೆಲ್ಲಾ ಬಹಳ



ಶ್ರೀ ವಿ. ರಾಮಲಿಂಗ ಅವರು ಸಭಾಗೃಹ ಉದ್ಘಾಟನೆ ಮಾಡುತ್ತಿರುವುದು.

ಸಂತೋಷವಾಗಿದೆ ಎಂದು ಮಾತನಾಡಿದರು.

ಶ್ರೀ ಚಂಪಕ್‌ನಾಥ್‌ರವರು ಮಾತನಾಡುತ್ತಾ ನನ್ನ ಮತ್ತು ಅಸೋಸಿಯೇಶನ್ನಿನ ಸಂಬಂಧ 1949ರಿಂದಲೂ ನಡೆದು ಬಂದಿದೆ. ಸಸಿಯಾಗಿದ್ದ ಅಸೋಸಿಯೇಷನ್ ಇಂದು. ಹೆಮ್ಮರವಾಗಿ ತನ್ನ



ಪೂರ್ಣಾಹುತಿ



ಶ್ರೀ ಚಂಪಕನಾಥರು ದೀಪವನ್ನು ಬೆಳಗಿಸುತ್ತಿರುವುದು.



ಶ್ರೀಮತಿ ಶಾರದಮ್ಮ ನವರು ರಂಗ ಮಂಚದ ಪೂಜೆ ಮಾಡುತ್ತಿರುವುದು.

ಬೆಳ್ಳಿಹಬ್ಬ, ಬಂಗಾರದ ಹಬ್ಬವನ್ನು ಮುಗಿಸಿಕೊಂಡು, ವಜ್ರಮಹೋತ್ಸವದತ್ತ ಸಾಗಿದೆ. ಇಲ್ಲಿನ ಸದಸ್ಯರುಗಳು ಪರಿಶ್ರಮದಿಂದ ಈ ಸಂಸ್ಥೆ ಮತ್ತಷ್ಟು ಏಳ್ಗೆ ಪಡೆಯಲಿ ಎಂದು ಹಾರೈಸಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಶ್ರೀಮತಿ ಸೀತಮ್ಮಾ ರಾವ್‌ರವರು ಮಾತನಾಡುತ್ತಾ 'ಹೊಸನೀರು ಬಂದು ಹಳೆನೀರನ್ನು ಕೊಚ್ಚಿತು' ಎಂಬ ಗಾದೆಯಂತೆ ಅಸೋಸಿಯೇಷನ್ನಿನ ಇಂದಿನ ಯುವ ಪೀಳಿಗೆ ಹಿರಿಯರನ್ನು ಮರೆಯದಿದ್ದುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಇಂದು ಅಸೋಸಿಯೇಷನ್ ಹಿರಿಯ ಸದಸ್ಯರನ್ನು ಸತ್ಕರಿಸಿ ಹಿರಿಯರನ್ನು ಮರೆತಿಲ್ಲ ಎಂಬುದನ್ನು ತೋರಿಸಿದೆ. ಇಂದಿನ ಈ ಸಂತೋಷದ ಸನ್ನಿವೇಷದಲ್ಲಿ ಹಿರಿಯಳಾಗಿ ನಾನು ಯುವ ಜನಾಂಗಕ್ಕೆ ಕೊಡುವ ಆಶೀರ್ವಾದವೆಂದರೆ ಹಿರಿಯರನ್ನು ಮರೆಯದೆ ಕಿರಿಯರನ್ನು ಬಿಡದೆ ಎಲ್ಲರನ್ನು ಒಳಗೊಂಡು ಸಂಸ್ಥೆ ಮುಂದುವರಿಯಲಿ, ಸರ್ವತೋಮುಖವಾದ ಏಳ್ಗೆಯನ್ನು ಅಸೋಸಿಯೇಷನ್ ಪಡೆಯಲಿ ಎಂದು ಹಾರೈಸಿದರು.

ನಂತರ ನೀಲಾ ಫಾಡೇಕರ್ ಮತ್ತು ಸಂಗಡಿಗರಿಂದ ಭಕ್ತಿ ಸಂಗೀತ ಕಾರ್ಯಕ್ರಮವಿತ್ತು. ಶ್ರೀ ಗಣಪತಿಗೆ ಮಹಾ ಮಂಗಳಾರತಿ ಪ್ರಸಾದವಿನಿಯೋಗದಿಂದ ಕಾರ್ಯಕ್ರಮ ಮುಕ್ತಾಯವಾಯ್ತು.



ಶ್ರೀಮತಿ ಸೀತಮ್ಮ ರಾವ್ ರಂಗ ಮಂಚದ ಪೂಜೆ ಮಾಡುತ್ತಿರುವುದು.


## MATRIMONIAL

Alliance invited for a girl of 24 years graduate (B.Com., MFAMM, PG CCA Comp.) working in Mysore. Weatish complexion 5'2" height Kowshika gotra Ashlesh II Pada Nakshatra. Boy should be qualified well settled Smartha Brahmin. Apply Box No. 177.

***

Alliance invited for a Smartha Brahmin Girl of 27 years Graduate, studying for MBA-1999 settled in USA Fair complexion 5'3" height Vaadhulasa Gothra Krithika Nakshatra. Boy should be well-qualified settled and or willing tosettle in USA, must be pure vegetarian. girls Father a medical practitioner. Mother a working women both well settled in USA. Apply Box No. 176

***

Proposal invited for a Kannada Vasihnava Madhwa brahmin Girl aged 22-23 Kashyapa Gotra Rohini Nakshtra. Presently doing B.S. in IBM with INFO Systens as Minor at Nairobi, Kenya. Interested well placed propective bridegroom from a good family background may contact Girl's grand father, Shri C.V.K. Rao, Flat 1B, 38, Gokulam Apartments II Main Road, Gandhi Nagar, Adyar, Chennai-600 020. Ph. 44-441 3944

# ಸ್ವರ್ಣಗೌರಿ ಹಾಗೂ ಮಹಾಗಣಪತಿಯ ಪೂಜಾ ಕಾರ್ಯಕ್ರಮ



*ಗೌರಿ ಗಣಪತಿಯನ್ನು ಕಡಲತೀರಕ್ಕೆ ಮೆರವಣಿಗೆಯಲ್ಲಿ...*

ಪ್ರತಿ ವರ್ಷದಂತೆ ಈ ವರ್ಷವೂ ತಾ. 12-9-1999ರ ಭಾನುವಾರ ಬೆಳಿಗ್ಗೆ ಅಸೋಸಿಯೇಷನ್ನಿನಲ್ಲಿ ಶ್ರೀ ಸ್ವರ್ಣಗೌರಿಯನ್ನು ಪ್ರತಿಷ್ಠಾಪಿಸಿ ಸುಹಾಸಿನಿಯರಿಂದ ಪೂಜೆ ನೆರವೇರಿತು. ತಾ. 13 ಸೋಮವಾರ ಶ್ರೀ ಮಹಾಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜೆ ಮಾಡಲಾಯ್ತು.

ಈ ಉತ್ಸವದ ಅಂಗವಾಗಿ ತಾ. 14ರಂದು ಅನುಜಾ ಮಹಿಳಾ ಮಂಡಲದವರಿಂದ ಭಕ್ತಿ ಗೀತೆಗಳ ಕಾರ್ಯಕ್ರಮವಿದ್ದಿತು. ಇವರುಗಳು ಪುರಂದರದಾಸರ ಪದಗಳಾದ ಕುಣಿ ಕುಣಿಯಲೋ ಕೃಷ್ಣ, ನಾರಾಯಣಾ ನಿನ್ನ ತಾರಕ್ಕ ಬಿಂದಿಗೆ, ಹಾಗೂ ಮರಾಠಿ ಅಭಂಗಗಳನ್ನು ಹಾಡಿ ಕಾರ್ಯಕ್ರಮ ನಡೆಸಿಕೊಟ್ಟರು. ತಾ. 15 ರಂದು ಕರ್ನಾಟಕ ಶೈಲಿಯ ಶಾಸ್ತ್ರೀಯ ಸಂಗೀತವನ್ನು ಶ್ರೀಮತಿ ವಿಜಯ ಲಕ್ಷ್ಮಿ ರಂಗರಾಜನ್ ಹಾಗೂ ವೃಂದದವರು ನಡೆಸಿಕೊಟ್ಟರು. ಇವರು ಶ್ರೀ ರಾಗದ ಸ್ವಾಮಿ ನಿನ್ನೆ ಎಂಬ ವರ್ಣದಿಂದ ಪ್ರಾರಂಭ ಮಾಡಿದರು. ಯಮನ್ ಕಲ್ಯಾಣಿಯಲ್ಲಿ ಕನ್ನಡದ ದೇವರ ನಾಮ ಕೃಷ್ಣಾ ನೀ ಬೇಗನೆ ಬಾರೋ ಹಾಗೂ ತಮಿಳಿನಲ್ಲಿ ದೇವರನಾಮಗಳನ್ನು ಹಾಡಿದರು. ಇವರಿಗೆ ಪಕ್ಕವಾದ್ಯವಾಗಿ ಶ್ರೀ ಆನಂದ್ ವೈಲಿನ್ ನುಡಿಸಿದರು. ಶ್ರೀ ಗೋಪಾಲಕೃಷ್ಣನ್ ಮೃದಂಗ ಬಾರಿಸಿದರು. ತಾ. 16 ರಂದು ಪಂಡಿತಾ ನೀರಾ ಫಾಣೇಕರ್ ಮತ್ತು ಸಂಗಡಿಗರಿಂದ ಭಕ್ತಿಗೀತೆಗಳ ಕಾರ್ಯಕ್ರಮವಿತ್ತು. ಇವರು ಮೊಟ್ಟಮೊದಲಿಗೆ ಪಂಚಪತಿ ಶೀಲಾದಿಯ ಅಂಗವಾಗಿ ಗುರುಸ್ತವ ಹಾಗೂ ಸಮರ್ಥರಾಮದಾಸರ ಹಾಗೂ ಜ್ಞಾನೇಶ್ವರರ ರಚನೆಗಳನ್ನು ಹಾಡಿದರು. ಇದಲ್ಲದೆ ಕನ್ನಡದ ದೇವರ ನಾಮ, ಶರಣು ಸಿದ್ಧಿ ವಿನಾಯಕ, ಬಾರಯ್ಯಾ ರಂಗ ಬಾರಯ್ಯಾ ಕೃಷ್ಣ ಹಾಡಿದರು. ಮೀರಾ ಭಜನ್, ಸಂತ ತುಕಾರಾಮ ಅಭಂಗ ಮುಂತಾದುವನ್ನು ಹಾಡಿದರು. ಮೀರಾ ಭಜನ್, ಸಂತ ತುಕಾರಾಮರ ಅಭಂಗ ಮುಂತಾದುವನ್ನು ಹಾಡಿದರು. ಇವರುಗಳು ಹಾಡಿದ 'ಅನಾದಿ ಅಂಬಿಕಾ ಭಗವತಿ' ಎಂಬ ಮರಾಠಿ ಹೋಂಧಳ ಬಹಳ ಸಂಗಸಾಗಿತ್ತು.

ತಾ. 17-9-99ರಂದು ಶುಕ್ರವಾರ ಸಂಜೆ 6ಗಂಟೆಗೆ ಮಹಿಳಾ ಸದಸ್ಯರಿಗೆ 'ಅರಿಸಿನ ಕುಂಕುಮ'ದ ಕಾರ್ಯಕ್ರಮವಿತ್ತು. ನಂತರ ಶ್ರೀಮತಿ ವಿಜಯಲಕ್ಷ್ಮಿನಾಥನ್ ಅವರಿಂದ ಸೊಗಸಾದ ಕರ್ನಾಟಕ ಶೈಲಿಯ ಸಂಗೀತ ಗಾಯನವನ್ನು ಶ್ರೀಮತಿ ವಿಜಯಲಕ್ಷ್ಮಿನಾಥನ್ ಅವರು ಕಳೆದ 46 ವರ್ಷಗಳಿಂದ ಅಸೋಸಿಯೇಷನ್ ಗಣಪತಿ ಉತ್ಸವದಲ್ಲಿ ಹಾಡುತ್ತ ಬಂದಿದ್ದಾರೆ. ವರ್ಷ, ವರ್ಷಕ್ಕೆ ಅವರ ಗಾಯನದ ಇಂಪು ಹೆಚ್ಚುತ್ತಲಿದೆ ಎಂದು ಭಾಸವಾಗುತ್ತಿದೆ.

ತಾ. 18-9-99ರಂದು ಶನಿವಾರ ಶ್ರೀಮತಿ ಅದಿತಿ ಜೋಷಿ ಅವರಿಂದ ಹಿಂದೂಸ್ಥಾನಿ ಶೈಲಿಯ ಗಾಯನ ಕಾರ್ಯಕ್ರಮವಿತ್ತು. ಈಕೆ ಪಂಡಿತಾ ನೀಲಾ ಫಾಣೇಕರ್ ಅವರಲ್ಲಿ ತಮ್ಮ ಸಂಗೀತಭ್ಯಾಸವನ್ನು ಆರಂಭ ಮಾಡಿದವರು. ಆಕಾಶವಾಣಿಯಲ್ಲಿ ಆಗಾಗ್ಗೆ ಕಾರ್ಯಕ್ರಮ ಕೊಡುತ್ತಿರುತ್ತಾರೆ. ಅತ್ಯಂತ ಸುಶ್ರಾವ್ಯ ಶಾರೀರವನ್ನು ಹೊಂದಿರುವ ಅದಿತಿಯವರ ಗಾಯನ ಒಂದು ರಸದೌತಣವಾಗಿತ್ತು.

ತಾ. 19ರಂದು ಬೆಳಿಗ್ಗೆ ಗಣಪತಿಗೆ ಪೂಜೆ ಶಂಕರ ಮಠದ ವೇದಪಾರಂಗತರಿಂದ ವೇದಘೋಷ, ನಂತರ ಶ್ರೀಮತಿ ಸುಶೀಲಾ ಆಚಾರ್ಯರವರು ತಮ್ಮ ಸಂಗಡಿಗರೊಂದಿಗೆ ಭಕ್ತಿ ಸಂಗೀತ ಕಾರ್ಯಕ್ರಮ ಸಾದರಪಡಿಸಿದರು.

ಇವರು ಉಪನಿಷದ್ ವಾಕ್ಯದಿಂದ ಪ್ರಾರಂಭಿಸಿ ದೇವೀಸ್ತುತಿ ಗಜಾನನ ಸ್ತುತಿ ಆಂಜನೇಯನ ಸ್ತುತಿಗಳನ್ನೂ ಹಾಗೂ ಹಿಂದಿಯಲ್ಲಿ ಮೀರಾ ಭಜನ್‌ಗಳು ಮುಂತಾದವನ್ನು ಹಾಡಿದರು. ಕಾಲಕಾಲ ಮುರುಳೀವಾಲ ಶ್ಯಾಮ ಪ್ಯಾರಾ ಪ್ಯಾರ ಎಂಬ ಭಜನೆ ಕಿರಿಯ ಕಲಾವಿದೆ ಉಜ್ವಲಾ ಚೆನ್ನಾಗಿ ಹಾಡಿದಳು

ನಂತರ ಗೌರಿ, ಗಣಪತಿಯನ್ನು ಮೆರವಣಿಗೆಯಲ್ಲಿ ಕರೆದೊಯ್ದು ದಾದರ್ ಬೀಚಿನಲ್ಲಿ ವಿಸರ್ಜಿಸಲಾಯ್ತು. ನಂತರ ನೆರೆದಿದ್ದ ಭಕ್ತಜನರಿಗೆ ಪ್ರಸಾದ ವಿನಿಯೋಗವಾಯಿತು.



*ದಾದರ್‌ನ ಕಡಲ ತೀರದಲ್ಲಿ.*

ವಾದಿರಾಜರು.

ಇವರ ಜನನ 1480ರಲ್ಲಾಗಿದೆ. ಇವರು ವ್ಯಾಸರಾಯರು, ಪುರಂದರದಾಸರು, ವೈಕುಂಠದಾಸರು. ಹಾಗೂ ಕನಕದಾಸರ ಸಮಕಾಲೀನರು. ಕನ್ನಡದಲ್ಲಿ ಭಾಗವತಧರ್ಮ ಪ್ರಚಾರ ಮಾಡಿದವರಲ್ಲಿ ನಾಲ್ಕನೆಯವರು. ಅಷ್ಟಮಟಗಳಲ್ಲಿ ಒಂದಾದ ಸ್ವಾದಿ ಮಠದ ಪೀಠಾರೋಹಣ ಮಾಡಿ 120 ವರ್ಷಗಳ ಕಾಲ ಪಾರ್ಥಿವ ಶರೀರದಿಂದ್ದಿದ್ದರು. ಇವರು ಹೆಸರಿಗೆ ತಕ್ಕಂತೆ ವಾದಿನಿಗ್ರಹ ಮಾಡಿದವರು. ಯುಕ್ತಿಯಿಂದ ಸಿದ್ಧಾಂತ ಮಂಡಿಸುವಲ್ಲಿ ಮಹಾ ನಿಪುಣರು. ಇವರು ಕವಿಗಳಾಗಿ ರುಕ್ಮಿಣೀಶ ವಿಜಯ. ಮತ್ತು ತೀರ್ಥ ಪ್ರಬಂದಗಳನ್ನಂಥಾ ಸರಸ ಕಾವ್ಯವನ್ನು ರಚಿಸಿದ್ದಾರೆ. ಹರಿದಾಸರಾಗಿ ಕನ್ನಡ ಮತ್ತು ತುಳುವಿನಲ್ಲಿ ನೂರಾರು ಪದಗಳನ್ನು ರಚಿಸಿದ್ದಾರೆ. ಇವರ ಅಂಕಿತ 'ಹಯವದನ' ಇವರು ವಿದ್ವಾಂಸರಾಗಿದ್ದು 'ಮುಕ್ತಿಮಲ್ಲಿಕೆ' ಎಂಬ ಸ್ವಾತಂತ್ರ ಸ್ವತಂತ್ರ ಗ್ರಂಥವನ್ನು ರಚಿನೆ ಮಾಡಿದ್ದಾರೆ. ಇದು ವಿದ್ಯಾರಣ್ಯರ ವೇದಾಂತ ಗ್ರಂಥವಾದ 'ಪಂಚದಶಿ'ಗೆ ಸಮವೆನ್ನುತ್ತಾರೆ.

ಇವರ ಜನನ ದಕ್ಷಿಣ ಜಿಲ್ಲೆಯ ಕುಂಬಾಸಿಯ ಬಳಿ ಹೂವಿನಕೆರೆ ಎಂಬ ಗ್ರಾಮ ವಾಸಿಗಳಾದ ರಾಮ ಭಟ್ಟ ಹಾಗೂ ಗೌರಮ್ಮ ಎಂಬ ಬಡ ದಂಪತಿಗಳಿಗೆ 1480ರಲ್ಲಿ ಹುಟ್ಟಿದರು. ಸ್ವಾದೀ ಮಠದ ವಾಗೀಶ ತೀರ್ಥರಿಂದ ಆಶ್ರಮ ಸ್ವೀಕರಿಸಿದರು.

ಇವರು ಚಿಕ್ಕಂದಿನಲ್ಲೇ ಬಹಳ ಪ್ರತಿಭಾವಂತರಾಗಿದ್ದು ಬಾಲ್ಯದಲ್ಲೇ ಉಗಾಬೋಗ ರಚನೆ ಮಾಡಿದ್ದಾರೆ. ಇವರು ಹೈಗ್ರೀವೋಪಾಸಕರಾಗಿದ್ದು ಇವರ ರಚನೆಗಳು ಹಯವದನನಿಗೆ ಸಮರ್ಪಿತವಾಗಿದೆ.

ಇವರಿಗೆ ಶ್ರೀ ಹರಿಯು ಹಯವದನನಾಗಿ (ದಿವ್ಯಾಶ್ವ ರೂಪದಲ್ಲಿ) ಕಾಣಿಸಿಕೊಳ್ಳುತ್ತಿದ್ದ. ಇವರು ಪ್ರತಿದಿನ ಕಡಲೆಯ ಹೂರಣವನ್ನು ಮಾಡಿಸಿ ದೇವರಿಗೆ ನೈವೇದ್ಯ ಮಾಡಿ ಅದನ್ನು ಒಂದು ಹರಿವಾಣದಲ್ಲಿ ತುಂಬಿ ತಲೆಯಮೇಲೆ ಇಟ್ಟುಕೊಂಡು ಏಕಾಂತ ಸ್ಥಳದಲ್ಲಿ ಧ್ಯಾನಾಸಕ್ತರಾಗುತ್ತಿದ್ದರಂತೆ ಇವರ ಆರಾಧ್ಯ ದೈವ ಹಯಗ್ರೀವ ಮೂರ್ತಿಯು ದಿವ್ಯಾಶ್ವರೂಪ ತಾಳಿ ತನ್ನ ಮುಂಗಾಲುಗಳನ್ನು ಇವರ ಹೆಗಲ ಮೇಲಿಟ್ಟು, ತನ್ನ ಹಿಂಗಾಲುಗಳ ಮೇಲೆ ನಿಂತು ಹೂರಣವನ್ನು ತಿನ್ನುತ್ತಿದ್ದನಂತೆ ಹಾಗೂ ವಾದಿರಾಜರಿಗಾಗಿ ಕೊಂಚ ಉಳಿಸುತ್ತಿದ್ದನಂತೆ. ಇದನ್ನೇ ಇವರು ಪ್ರಸಾದ ರೂಪವಾಗಿ ಸ್ವೀಕರಿಸುತ್ತಿದ್ದರಂತೆ. ಪಶ್ಚಿಮ ಬಂಗಳಾದ ಗೌಡೀಯ ಸಂಪ್ರದಾಯ ಕೃಷ್ಣಚೈತನ್ಯರು ಶ್ರೀ ವ್ಯಾಸರಾಯ ಸ್ವಾಮಿಗಳಿಂದ ಹರಿದಾಸ ದೀಕ್ಷೆ ಪಡೆದು ಉಡುಪಿಗೆ ಬಂದು ವಾದಿರಾಜಸ್ವಾಮಿಗಳನ್ನು ಕಂಡಿದ್ದಾರೆಂದು ಉಲ್ಲೇಖವಿದೆ. ಇವರು ಶ್ರೀ ಶ್ರೀಪಾದರಾಯರ ಮತ್ತು

# ಹರಿದಾಸ ಸಾಹಿತ್ಯ ಭಾಗ - 10

● ರಮಾಕೃಷ್ಣ

ಶ್ರೀ ವ್ಯಾಸರಾಯ ಸ್ವಾಮಿಗಳ ಮೇಲ್ಪಂಕ್ತಿಯನ್ನನುಸರಿಸಿ ದಾಸಕೂಟಕ್ಕೆ ಬೆಂಬಲವಿತ್ತುದಲ್ಲದೆ ಉಡುಪಿಯ ಬಳಿ ವಾಸವಾಗಿದ್ದ ಕೆಲ ಅಸ್ಪೃಷ್ಯರಿಗೆ ದಾಸ ದೀಕ್ಷೆಯನ್ನು ಅವರಿಗೆ ತುಳು ಭಾಷೆಯಲ್ಲಿ ಪದಗಳನ್ನು ರಚಿಸಿ ಕೊಟ್ಟು, ಅವರಿಗೆ ತುಳು ಭಾಷೆಯಲ್ಲಿ ಪದಗಳನ್ನು ರಚಿಸಿ ಕೊಟ್ಟು ಕ್ರಾಂತಿಕಾರಿ ಹೆಜ್ಜೆ ಇಟ್ಟವರಾಗಿದ್ದಾರೆ. ಇಂದಿಗೂ ಈ ಕುಟುಂಬಗಳವರು ಹರಿದಾಸರಾಗಿ ಭಗವಂತನ ಸೇವೆ ಮಾಡುತ್ತಿರುವುದಾಗಿ ತಿಳಿದು ಬಂದಿದೆ. ಇವರು ಬೇಲೂರಿನಲ್ಲಿದ್ದ ಶ್ರೀ ವೈಷ್ಣವ ಪಂಗಡಕ್ಕೆ ಸೇರಿದ್ದ ವೈಕುಂಠದಾಸರನ್ನು ಭೇಟಿ ಮಾಡಿದ್ದರು. ಹಾಗೂ ಬೇಲೂರು ಚೆನ್ನಕೇಶವನ ಮೇಲೆ ತಮ್ಮ ರಚನೆಗಳನ್ನು ಮಾಡಿದ್ದಾರೆ. ಇವರು ಬೇಲೂರು ತಲುಪಿದಾಗ ಕೇಶವನ ಮೇಲೆ ತಮ್ಮ ರಚೆಗಳನ್ನು ಮಾಡಿದ್ದಾರೆ. ಇವರು ಬೇಲೂರು ತಲಪಿದಾಗ ಕೇಶವದೇವರ ಉತ್ಸವ ಎದುರಿಗೆ ಬಂತು ಅದನ್ನು ಕಂಡು ಈ ರಚನೆ ಮಾಡಿದ್ದಾರೆ.

'ಬೇಗ ಬಾರೋ ಬೇಗ ಬಾರೋ ವೇಲಾಪುರ ಚೆನ್ನ ।
ಬೇಗ ಬಾರೋ ಬೇಗ ಬಾರೋ । ನೀಲ ಮೇಘ ವರ್ಣ ।
ಇಂದಿರಾ ರಮಣ ಗೋವಿಂದ ಬೇಗ ಬಾರೋ
ನಂದಕಂದ ಮುಕುಂದ ಬೇಗ ಬಾರೋ
ಧೀರಾ ಉದಾರಾ ಗಂಭೀರಾ ಬೇಗ ಬಾರೋ ।
ಹಾರಾಲಂಕಾರ ರಘುವೀರ ಬೇಗಾ ಬಾರೋ
ಆಯ್ಯಾ ವಿಜಯ್ಯಾ ಸಹಯ್ಯಾ ಬೇಗ ಬಾರೋ ।
ಜೀಯ ಫಣೀಶಯ್ಯಾ, ಹಯವದನ ಬೇಗ ಬಾರೋ!

ಎಂದು ಹಾಡಿ ದೇವರ ಉತ್ಸವದಲ್ಲಿ ಕುಣಿಯುತ್ತಿರಲು ವೈಕುಂಠದಾಸರೂ ಇವರನ್ನು ಸೇರಿಕೊಂಡು ನರ್ತನ ಮಾಡಿದರಂತೆ.

ಸ್ವಾದೀ ಸಂಸ್ಥಾನ ವಿಜಯನಗರದ ಅರಸರ ವಶದಲ್ಲಿದ್ದು ಅದರ ಮಾಂಡಲೀಕ ಸರಸಪ್ಪ ನಾಯಕನೆಂಬುವವನಿದ್ದ ಈತನ ಅಳಿಯ ಅಕಾಲ ಮೃತ್ಯುವಿಗೆ ಒಳಗಾದಾಗ 108 ಚರಣಗಳ ಲಕ್ಷ್ಮೀ ಶೋಬಾನೆಯನ್ನು ರಚನೆ ಮಾಡಿ ಶ್ರೀ ಲಕ್ಷ್ಮೀಯನ್ನು ಪ್ರಾರ್ಥಿಸಿ ಮದುಮಗನನ್ನು ಬದುಕಿಸಿದರಂತೆ, ಆಶೋಭಾನೆ ಪದ ಈ ರೀತಿ ಇದೆ.

॥ ಪ ॥ ಶೋಭನವೆನ್ನಿ ಸುರರೊಳು. ಸುಭಗನಿಗೆ
ಶೋಭನವೆನ್ನಿ ಸುರಪ್ರಿಯಗೆ
ಶೋಭನವೆನ್ನಿ ತ್ರಿವಿಕ್ರಮ ರಾಯಗೆ
ಶೋಭನವೆನ್ನಿ ಸುಗುಣನಿಗೆ ॥ ಶೋಭಾನೆ ॥

ಕೊನೆಯ ಚರಣ :- ಈ ಪದವ ಪಾಡಿದ ವಾದಿರಾದ ಮುನಿಯ
ಶ್ರೀ ಪತಿ ಯಾದ ಹಯವದನ
ತಾಪನ ಕಳೆದು ಚರಣದ ಸ
ಮೀಪದಲಿಟ್ಟು ಸಲಹಲೀ ॥ ಶೋ ಭಾನೆ ॥

ಇವರು. ತಮ್ಮ ಪಾಲಿಗೆ ಬರುವ ಪರ್ಯಾಯ ಪೂಜೆಯನ್ನು ಮುಗಿಸಿ ದೇಶ ಸಂಚಾರ ಹೊರಟರೆ ಮತ್ತೆ ತಮ್ಮ ಪರ್ಯಾಯ ಬಂದಾಗ ಉಡುಪಿಗೆ ಬರುತ್ತಿದ್ದರು. ಪರ್ಯಾಯ ಇವರು ಪೀಠಕ್ಕೆ ಬರುವುದಕ್ಕೆ ಮುಂಚೆ ಎರಡು ತಿಂಗಳಿಗಿದ್ದಿತಂತೆ ಇವರು ಪರ್ಯಾಯ ಪೂಜೆಯನ್ನು ಉಡುಪಿಯ ಅಷ್ಟಮಠದ ಯತಿಗಳೆಲ್ಲರನ್ನೆಲ್ಲಾ ಸೇರಿಸಿ ಸಮಾಲೋಚನೆ ನಡೆಸಿ ಎಲ್ಲಾ ಯತಿಗಳ ಸಮ್ಮತಿಪಡೆದು । ಪರ್ಯಾಯ ಪೂಜೆಯ ಕಾಲಾವಧಿಯನ್ನು 2 ವರ್ಷಗಳಿಗೆ ಮಾಡಿದರಂತೆ. 8 ಮಠದ ಯತಿಗಳ ಪೂಜೆ ಮುಗಿಯಲು ಒಟ್ಟು 16 ವರ್ಷಬೇಕು. ಇವರು ತಮ್ಮ 2 ವರ್ಷದ ಪರ್ಯಾಯ ಪೂಜೆ ಮುಗಿಸಿ ಮಿಕ್ಕ 14 ವರ್ಷ ಇವರು. ದೇಶ ಸಂಚಾರ ಮಾಡುತ್ತಿದ್ದರಂತೆ. ಈ ರೀತಿ ಇವರು ನಾಲ್ಕು (4) ಪರ್ಯಾಯ ಪೂಜೆ ಮಾಡಿದ್ದಾರೆ. ಕೊನೆಯ ಅಂದರೆ 5ದನೆಯ ಪರ್ಯಾಯದ ಪೂಜೆ. ಇನ್ನು 3 ದಿನ ಇರುವಾಗ ದೇವ ದೂತರು ಬಂದು ಇವರನ್ನು 'ನಿಮ್ಮ ಭೂ ಲೋಕದ ವಾಸ ಮುಗಿಯಿತು. ಇನ್ನು ನಮ್ಮೊಡನೆ ಬರಬೇಕು' ಎಂದು ಕೇಳಿದಾಗ. ಆಗಲಿ ಬರುವೆವು . ಉತ್ಸವಾಂಗವಾದ. ಅವಭೃತ ಸ್ನಾನ ಮಾಡಿ ಬರುವೆವು. ಇನ್ನು ಮೂರು ದಿನ ನಾವಿಲ್ಲಿರಬೇಕಾಗಿದೆ ಎಂದು ಹೇಳಿ ಅವರನ್ನು ಹಿಂದಕ್ಕೆ ಕಳಿಸಿ ತಮ್ಮ ಪಾಲಿನ ಪರ್ಯಾಯದ ಪೂಜೆ ಮುಗಿಸಿ ತಾವೇ ಬೃಂದಾವನ ಪ್ರವೇಶಿಸಿದರಂತೆ ಜಪಮಾಲೆ ಹೊರಗೆ ಬಿದ್ದೊಡನೆ ಸಂಪುಟ ಶಿಲೆ ಇಡಬೇಕೆಂಬು ತಮ್ಮ ಶಿಷ್ಯ ವರ್ಗಕ್ಕೆ ಆಜ್ಞೆ ಮಾಡಿದ್ದರಂತೆ. ಅದರಂತೆ ವಾದಿರಾಜರು 1600ರಲ್ಲಿ ಇಹಲೋಕಯಾತ್ರೆಯನ್ನು ಮುಗಿಸಿದರೆಂದು ಜಗನ್ನಾಥದಾಸರ ಈ ಕೃತಿಯಿಂದ ತಿಳಿಯುತ್ತದೆ.

ಯಮಿಯರನು ತ್ರಿವಿಕ್ರಮನ ರಥೋತ್ಸವದ
ಸಮಯವರಿತು ಉತ್ತಮನಾವ ತೊರೆದ ॥ ವಾದಿರಾಜ॥
ಬಂದು ಕರೆಯಲು ಪುರಂದರ ನಾಳ್ಗಳ ।
ಹಿಂದಟ್ಟಿದೆ ಕರ್ಮಂದಿಗಳ ರಸ ॥ ವಾದಿರಾಜ ॥

ಎಂದು ವಾದಿರಾಜರ ಮಹಿಮೆಯನ್ನು ಕುರಿತು ಹಾಡಿದ್ದಾರೆ.

ಉಡುಪಿಯಲ್ಲಿ ಇವರು ಪೂಜಾ ಕಾಲದಲ್ಲಿ ಭಗವನ್ನಾಮ ಸಂಕೀರ್ತನೆ ಮಾಡುವುದನ್ನು ಅಂದರೆ ಕನ್ನಡದ ಪದಗಳನ್ನು ಹಾಡುವ ಪದ್ಧತಿಯನ್ನು ಶ್ರೀ ಶ್ರೀಪಾದರಾಯರಂತೆಯೇ ಜಾರಿಗೆ ತಂದಿದ್ದರಂತೆ ಆ ಪದ್ಧತಿ ಉಡುಪಿಯಲ್ಲಿ ಇಂದಿಗೂ ನಡೆದು ಬಂದಿದೆ.

(ಮುಂದುವರಿಯುವುದು)

## ಬೇಡದ ಅತಿಥಿಗಳು

(ಪುಟ 6ರಿಂದ)

ಬಡಾಯಿ ಕೊಚ್ಚಿಕೊಳ್ಳುವುದಕ್ಕಾಗಿ, ಕಳಿಸಿದ ಆಹ್ವಾನ. ಅದರಲ್ಲಿರುವ ಮಾತು ಒಂದೂ ಸತ್ಯವಲ್ಲ. ನೀವು ಕುಟುಂಬ ಪರಿವಾರ ಸಮೇತರಾಗಿ "ಹೋಗುವುದು ಹಾಗಿರಲಿ, ಒಂಟಿಯಾಗಿಯಾದರೂ ಬರಲಿ ಎನ್ನುವ ಆಸೆಯೇನೂ ಅವರಿಗಿಲ್ಲ. ಎರಡು ದಿನ ಮುಂಚಿತವಾಗಿ ನೀವು ಹೋದರೆ ಅವರ ಕಣ್ಣು ಕೆಂಪಗಾಗುತ್ತದೆ. ಮನಸ್ಸಂತೋಷಪಡಿಸಿದಂತೇನೂ ಆಗುವುದಿಲ್ಲ. ನಮ್ಮ ಬಳಗದವರ ಗುಂಪೇ ಸಾಕಾಗಿತ್ತು, ಇವರು ಬೇರೆ ಬಂದು ವಕ್ಕರಿಸಿದವರಲ್ಲ. 'ನಮ್ಮ ಬಳಗದವರ ಗುಂಪೇ ಸಾಕಗಿತ್ತು, ಇವರು ಬೇರೆ ಬಂದು ವಕ್ಕರಿಸಿದರಲ್ಲ!' ಎಂದು ನಿಮ್ಮನ್ನು ಶಪಿಸದಿದ್ದರೆ ಅದು ನಿಮ್ಮ ಸುಯೋಗ. ನೀವು ಧಾರೆಯ ದಿನ ಸಂಜೆ ರಿಸೆಪ್ಶನ್"ಗೆ ಮಾತ್ರ ಹೋಗಿ ಸಂಗೀತ ಕೇಳೋಣವೆಂದು ಸ್ವಲ್ಪ ಹೆಚ್ಚು ಹೊತ್ತು ಅಲ್ಲಿ ಕುಳಿತರೂ ಅವರಿಗೆ ತೊಂದರೆ. ಅಲ್ಲಿಗೆ ಬರುವ ಜನ ಹೆಚ್ಚು , ಹಾಕಿರುವ ಕುರ್ಚಿಗಳು ಕಡಿಮೆ. ಮನೆಯ ಯಜಮಾನರು 'ಇವನು ಬೇಗ ಕಾಲುಕಿತ್ತರೆ ಸಾಕು, ಇನ್ನೊಬ್ಬರಿಗೆ ಜಾಗವಾಗುತ್ತದೆ' ಎಂದುಕೊಳ್ಳುತ್ತಾ ನೀವು ಹೋದೊಡನೆ ಗಂಧ ಪುಷ್ಪ ತಾಂಬೂಲಗಳನ್ನು ಕೊಡುತ್ತಾರೆ.'ಇನ್ನು ನೀವು ಹೊರಡಬಹುದು' ಎಂದು ಬಾಯಿಬಿಟ್ಟು ಹೇಳುವುದಿಲ್ಲ, ಅಷ್ಟೆ. ವಧೂವರರಿಗೆ ಆಶೀರ್ವಾದ ಮಾಡಬೇಕೆಂಬ ಕೋರಿಕೆಯ ವಿಷಯದಲ್ಲೂ ನೀವೇನೂ ಭ್ರಾಂತಿಯನ್ನಿಟ್ಟು ಕೊಳ್ಳಬೇಡಿ; ವಧೂವರರ ಮನಸ್ಸು ನೆಟ್ಟಿರುವುದು ನಿಮ್ಮ ಆಶೀರ್ವಾದದ ಮೇಲಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅದ್ದರಿಂದ ವಿವಾಹಮಹೋತ್ಸವದ ಸಂದರ್ಭದಲ್ಲಿ ನಿಮಗೆ ಸ್ಪಷ್ಟವಾದ ಔತಣವಿದ್ದರೂ ನೀವು ಬೇಡದ ಅತಿಥಿಯೇ. ನೀವು ಬಂದಿದ್ದರೋ ಇಲ್ಲವೋ ಎನ್ನುವುದು ಸಹ ಅವರಿಗೆ ಗೊತ್ತಿರುವುದಿಲ್ಲ. ಅಲ್ಲಿಗೆ ಹೋಗದಿರುವುದೇ ಜಾಣತನ. ಹೋದರೆ ನಿಮಗೆ ಸಿಕ್ಕುವುದು ನಾಲ್ಕಾಣೆಯ ತೆಂಗಿನಕಾಯಿ. ನಿಮಗಾಗುವ ಗಾಡಿ ಬಾಡಿಗೆಯ ಖರ್ಚು ಎರಡುರೂಪಾಯಿ !

ಮದುವೆ ಮುಂಜಿಗಳಂತೂ ವಿಶೇಷ ಸಂದರ್ಭಗಳು. ಪಟ್ಟಣವಾಸದವರು ದಿನ ದಿನವೂ ನಡಸಬೇಕಾದ ಅತಿಥ್ಯವೇನೂ ಕಡೆಗಣಿಸುವಂಥಾದ್ದಲ್ಲ. ಕಾಫಿಯೊಂದನ್ನು ಮಾತ್ರ ನೆನಪಿಗೆ ತಂದುಕೊಂಡರೆ ಸಾಕು. ಹಿಂದಿನ ಸ್ವರ್ಣಯುಗದಲ್ಲಿ ಮನೆಗೆ ಬಂದ ಸ್ನೇಹಿತರಿಗೆ ಕಾಫಿ ಕೊಟ್ಟೇ ಕೊಡಬೇಕೆಂಬ ನಿಮಯವಿರಲಿಲ್ಲ. ಈಗ ಯಾರು ಯಾವ ಹೊತ್ತಿನಲ್ಲಿ ಬಂದರೂ ಕಾಫಿಯನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಬಂದವರು ಅದನ್ನು ಬಯಸುತ್ತಾರೆಂದಲ್ಲ; ಅನೇಕ ವೇಳೆಕೊಟ್ಟ ಕಾಫಿಯನ್ನು ಕುಡಿಯುವುದೆಂದರೆ ಅವರಿಗೆ ಹಿಂಸೆ ಕೊಡುವುದು ನಮಗೆ ಸುಲಭವೆಂದೂ ಅಲ್ಲ... ಮನೆಯ ಯಜಮಾನಿತಿಯ ಜೀವನದಲ್ಲಿ ಅರ್ಧಕಾಲ ಕಾಫಿಯ ಕೆಲಸದಲ್ಲೇ ವ್ಯಯವಾಗುತ್ತದೆ. ಆದರೂ ಈಗ ಕಾಫಿ ಕೊಡುವುದು ಸನಾತನ ಧರ್ಮವಾಗಿ ಬಿಟ್ಟಿದೆ, ಕಾಫಿ ನಮ್ಮ ದೇಶಕ್ಕೆ ಸನಾತನವಲ್ಲದಿದ್ದರ ಮಹಿಳೆಯರು, ಬಂದರಂತೂ ಮತ್ತೂ ಕಷ್ಟ. ಹಿಂದಿನ ಕಾಲದಲ್ಲಿ ಕುಂಕುಮ, ಒಂದೆರಡು ಆದರದ ಮಾತು... ಇಷ್ಟರಲ್ಲಿ ಆತಿಥ್ಯನ್ನು ಮುಗಿಸಬಹುದಾಗಿತ್ತು. ಯಾವನೋ ಹುಳಿತುಹೋಗುವಷ್ಟು ಹಣಗಳಿಸಿದ್ದ ಕಾಳ ಸಂತೆಯ ವ್ಯಾಪಾರಿ ತೆಂಗಿನಕಾಯಿ ಕೊಡುವ ಪದ್ಧತಿಯನ್ನು ಚಾಲತಿಗೆ ತಂದ ! ತೆಂಗಿನಕಾಯಿಯೊಂದಕ್ಕೆ ನಾಲ್ಕಾಣೆ ಕೊಡಬೇಕಾಗಿರುವಾಗ, ರೂಪಾಯಿಗೆ ಒಂದು ಸೇರು ನೀರಕ್ಕೀರವೂ ಸಿಕ್ಕುವುದು ಕಷ್ಟವಾಗಿರುವಾಗ, ಬಂದ ಅತಿಥಿಗಳು ಎಷ್ಟೇ ಪ್ರಿಯರಾದರೂ ಬೇಡದ ಅತಿಥಿಗಳೇ ಆಗುತ್ತಾರೆ.

ಪಾಶ್ಚಾತ್ಯರಲ್ಲಿ Paying guest ಎನ್ನುವ ಪದ್ಧತಿಯಿದೆ. ನಿಜವಾಗಿ ನೋಡಿದರೆ Paying guest ಎನ್ನುವುದು ವಿರೋಧಾಭಾಸ. ಅತಿಥ್ಯ ಪ್ರತಿಫಲವಾಗಿ ಹಣ ಕೊಡುವವನು ಅತಿಥ್ಯಕ್ಕೆ ಪ್ರತಿಫಲವಾಗಿ ಹಣ ಕೊಡುವವನು ಅತಿಥಿ ಹೇಗಾದನು? ಅದೇನಾದ್ರೂ ಆಗಲಿ, ನಮ್ಮಲ್ಲೂ ಈ ಪದ್ಧತಿ ಆಚರಣೆಗೆ ಬಂದರೆ ಅತಿಥಿ ಅತಿಥೇಯರಿಬ್ಬರಿಗೂ ಸೌಖ್ಯ. ಇದು ಕಾಫಿ ಕುಡಿದಾಗಲೆಲ್ಲಾ ನಾವು ಎರಡಾಣೆ ಕೊಡುವುದಾಗಲಿ ತೆಗೆದುಕೊಳ್ಳುವುದಾಗಲಿ ಸಾಧ್ಯವಿಲ್ಲ. ಸಾಧ್ಯವಾಗಲೂ ಬಾರದು. ಆದರೆ ಯಾರಾದರೂ ಒಬ್ಬರ ಮನೆಯಲ್ಲಿ ನಾವು ಎಂಟು ದಿನ ಇರಬೇಕಾದಾಗ, ನಮ್ಮ ಹುಡುಗನನ್ನು ಅವರ ಮನೆಯಲ್ಲಿ ಓದುವುದಕ್ಕೆ ಬಿಡಬೇಕಾದಾಗ, ವಿಶ್ವಾಸಕ್ಕೆ ಕುಂದಿಲ್ಲದಂತೆ ಅದಕ್ಕೆ ಪ್ರತಿಫಲ ಕೊಡಬಹುದಾದರೆ, ನಮ್ಮ ಮನಸ್ಸೂ ನಿರಾಳವಾಗುತ್ತದೆ. ಆತಿಥೇಯನ ಕಷ್ಟವೂ ಕಡಿಮೆಯಾಗುತ್ತದೆ. ಆದರೆ ಇಂದಿನ ಸಮಾಜದ ವ್ಯವಸ್ಥೆಯಲ್ಲಿ ಇದು ಸಭ್ಯವರ್ತನೆಯಲ್ಲವಾಗಿದೆ. ರೇಷನ್ ಇದ್ದ ಕಾಲದಲ್ಲಿ ನಾವು ಅತಿಥಿಗಳಿಗೆ ಆಹ್ವಾನ ಕೊಡುವಾಗ `ನಿಮ್ಮ ರೇಷನ್ ತೆಗೆದುಕೊಂಡು ಬನ್ನಿ' ಎಂಬ ಮಾತನ್ನು ಸೇರಿಸುತ್ತಿದ್ದೆವು. ಅದು Paying guest ಪದ್ಧತಿಗೆ ಅಂಕುರಾರ್ಪಣವಾದೀತೇನೋ ಎಂಬ ಭ್ರಮೆ ಕೆಲವರಿಗಿತ್ತು. ಆದರೆ ಅದು ಅಧಿಕಾರಿಗಳ ಕಣ್ಣಿಗೆ ಮಣ್ಣೆರಚುವ ಸಾಧನ ಮಾತ್ರವಾಯಿತು. ಅಧಿಕಾರಿಗಳ ಕಣ್ಣಿಗೆ ಮಣ್ಣೆರಚುವ ಸಾಧನ ಮಾತ್ರವಾಯಿತು. ಅಧಿಕಾರಿಗಳೂ ಅದಕ್ಕೆ ಸಂಬಂಧಪಟ್ಟ ಆಜ್ಞೆಯನ್ನು ಹೊರಡಿಸುವುದಕ್ಕೆ ಮೊದಲೇ ಜಾಣಕುರುಡನ್ನು ಬರಮಾಡಿಕೊಂಡಿದ್ದರು.

ಅಂತೂ ದಿನ ಕಳೆದ ಹಾಗೆಲ್ಲಾ ಅತಿಥಿಗಳ ಸಮಸ್ಯೆಯನ್ನು ಬಿಡಿಸುವುದು ಕಷ್ಟವಾಗುತ್ತಿದೆ. ನಿಜವಾಗಿ ನೋಡಿದರೆ ಇದು ಬೇಡದ ಅತಿಥಿಗಳ ಸಮಸ್ಯೆಯಲ್ಲ. ಪ್ರಿಯರಾದ ಅತಿಥಿಗಳು ಆರ್ಥಿಕ ಕಾರಣಗಳಿಂದಾಗಿ ಬೇಡವಾಗುತ್ತಾರಲ್ಲ, ಇದನ್ನು ತಪ್ಪಿಸುವುದು ಹೇಗೆ ಎಂಬ ಸಮಸ್ಯೆ. ನಾನು ಇದುವರೆಗೂ ಹೇಳಿದ್ದನ್ನು ಕೇಳಿ `ಇವನು ಶುದ್ಧ ಜಿಪುಣ ಎಂದು ಕೊಳ್ಳಬೇಡಿ. ಸಮಸ್ಯೆಯನ್ನು ವಾಸ್ತವಿಕ ದೃಷ್ಟಿಯಿಂದ, ಅರ್ಥಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸುತ್ತಿದ್ದೇನೆ, ಅಷ್ಟೆ. ನೀವು ನಮ್ಮ ಮನೆಗೆ ಬಂದರೆ ನನಗೆ ನಿಜವಾಗಿಯೂ ಸಂತೋಷ. ಎಷ್ಟೋ ವೇಳೆ ನಾನು ನಮ್ಮ ಮನೆಗೆ ಬಂದರೆ ನನಗೆ ನಿಜವಾಗಿಯೂ ಸಂತೋಷ. ಎಷ್ಟೋ ವೇಳೆ ನಾನು ಬಂಧುಮಿತ್ರರ ಸಹವಾಸಕ್ಕಾಗಿ ಹಂಬಲಿಸಿದ್ದೇನೆ. ಖಂಡಿತ ಬನ್ನಿ. ನಮ್ಮ ಮನೆಯಿರುವುದೇನೋ ಬೆಂಗಳೂರಿನ ಒಂದು ಕೊನೆಯಲ್ಲಿ; ಬಸ್ಸುಗಳ ಅನುಕೂಲ ಅಷ್ಟಾಗಿ ಇಲ್ಲ. ನಿಮಗಿರುವ ನೂರೆಂಟು ಕೆಲಸಗಳಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಕಾಣೆ. ಆದರೂ ನೀವು ಬರುವುದಾದರೆ ನನಗೆ ಸತ್ಯವಾಗಿಯೂ ಸಂತೋಷ.

## ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಸಂಭ್ರಮದ ಗಣೇಶೋತ್ಸವ

ಮುಂಬಯಿ : ಮಾಟುಂಗದಲ್ಲಿರು ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು. ತಾ. 13-9-99ರಿಂದ 15-9-99ರಂದು ಬೆಳಿಗ್ಗೆ ಗಂಟೆ 9-30ಕ್ಕೆ ವಿಗ್ರಹ ಪ್ರತಿಷ್ಠಾಪನೆ, ಸಂಜೆ ಗಂಟೆ 6-00ಕ್ಕೆ ಪಂಡಿತ ರಾಘವೇಂದ್ರಚಾರ್ಯ ಸಾಂಗ್ಲಿಯವರಿಂದ ಪ್ರವಚನ ನಡೆಯಿತು. ತಾ. 14-9-99ರಂದು ಸಂಜೆ ಗಂಟೆ 6-30ಕ್ಕೆ ಶ್ರೀ ಟಿ. ಎನ್. ಅಶೋಕ್ (ಮುಂಬಯಿ ಆಕಾಶವಾಣಿ ಕಲಾವಿದ) ಶ್ರೀ ಸುಧೀರ ಕುಡ್ವ, ಶ್ರೀ ಪದ್ಮನಾಭ ಶೆಟ್ಟಿ ಹಾಗೂ ಇತರ ಸಂಘದ ಸದಸ್ಯರಿಂದ ಭಜನಾ ಮತ್ತು ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ತಾ. 15-9-99ರಂದು ಸಂಜೆ ಗಂಟೆ 6-30ಕ್ಕೆ ಡೊಂಬಿವಲಿಯ ಅನುಜಾ ಮಹಿಳಾ ಸಂಘದ ಸದಸ್ಯರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಇದರಲ್ಲಿ ಶ್ರೀಮತಿ ಸಾವಿತ್ರಿ ಮೂರ್ತಿ ದೇವಕಿ ಕಾಂಚನ್ ಹಾಡುಗಾರಿಕೆಯಲ್ಲೂ ಶ್ರೀಮತಿ ಕುಸುಮ ಕುಲಕರ್ಣಿ ಹಾರ್ಮೋನಿಯಂ ವಾದಕರಾಗಿಯೂ ಗಣೇಶ್ ಗುಡ್ಡದ ತಬ್ಲವಾದಕರಾಗಿಯೂ ಸಹಕರಿಸಿದರು.

ಈ ಸಮಾರಂಭಕೆ ಮುಖ್ಯ ಅತಿಥಿಯಾಗಿ ಟೆಕ್ಸ್‌ಟೈಲ್ ಕಮಿಟಿಯ ಮಾಜಿ ಸಂಚಾಲಕರಾದ ಡಾ. ಬಿ. ಆರ್. ಮಂಜುನಾಥ್ ಅವರು ಆಗಮಿಸಿದ್ದರು. ಅವರು ಮುಂಬಯಿ ಕನ್ನಡ ಸಂಘವು ನಡೆಸುವ ಕಾರ್ಯಕ್ರಮಗಳ ಬಗ್ಗೆ ಪ್ರಶಂಸಿಸಿ ಇತ್ತೀಚೆಗೆ ಮುಂಬಯಿ ಕನ್ನಡ ಸಂಘವು ನಡೆಸಲು ಪ್ರಾರಂಭಿಸಿದ ಕನ್ನಡ ಸರ್ಟಿಫಿಕೇಟು ಕೋರ್ಸಿಗೆ ಎಲ್ಲಾ ಕನ್ನಡ ಮಕ್ಕಳು ಸೇರಿ ಕನ್ನಡ ಕಲಿತರೆ ಕನ್ನಡಮ್ಮನ ಸೇವೆ ಮಾಡಿದಂತೆ ಆಗುತ್ತದೆ. ಇತರ ಭಾಷೆಯವರು ಈ ಕೋರ್ಸಿಗೆ ಜಾಸ್ತಿ ಪ್ರವೇಶ ತೆಗೆದುಕೊಂಡಿರುತ್ತಾರೆ. ನಮ್ಮ ಮಕ್ಕಳು ಕನ್ನಡ ಕಲಿಯಬೇಕು. ಮುಂಬಯಿ ಕನ್ನಡ ಸಂಘಕ್ಕೆ ಮೈಸೂರು ಎಸೋಸಿಯೇಶನ್ ವತಿಯಿಂದ ಎಲ್ಲಾ ವಿಧದ ಸಹಕಾರ ಕೊಡಲು ಸಿದ್ಧ ಎಂದು ತಿಳಿಸಿದರು.

ನೂತನ ದಂಪತಿಗಳಾದ ಸಂಘದ ಮಾಜಿ ಗ್ರಂಥಪಾಲಕ ಶ್ರೀ ರಾಜೇಂದ್ರ ಗಡಿಯಾರ ಮತ್ತು ಅವರ ಪತ್ನಿ ವಿಗ್ರಹ ಪ್ರತಿಷ್ಠಾಪನೆ ಮತ್ತು ವಿಸರ್ಜನಾ ಪೂಜೆ ನೆರವೇರಿಸಿದರು.

ಶ್ರೀ ಪಂಡಿತ ರಾಘವೇಂದ್ರಚಾರ್ಯ ಸಾಂಗ್ಲಿ, ಶ್ರೀ ಸಂಜೀವ ಸಾಂಗ್ಲಿ, ವೇದಮೂರ್ತಿ ಅಚ್ಚುತ ಭಟ್ ಮತ್ತು ಶ್ರೀ ನರಸಿಂಹ ಭಟ್‌ರಿಂದ ವೇದಘೋಷ ನಡೆಸಿ ಮಹಾ ಮಗಳಾರತಿ ಆದ ಬಳಿಕ ಮಂಗಳ ಮೂರ್ತಿಯನ್ನು ಶಿವಾಜಿ ಪಾರ್ಕಿನ ಸಮುದ್ರ ತೀರದಲ್ಲಿ ವಿಸರ್ಜಿಸಲಾಯಿತು.

ನಂತರ ಎಲ್ಲರಿಗೂ ಪ್ರಸಾದ ವಿನಿಯೋಗ ನಡೆಯಿತು. ಸಮಾರಂಭದಲ್ಲಿ ಅತೀ ಹೆಚ್ಚು ಸದಸ್ಯರು ಹಾಗೂ ಭಕ್ತಾದಿಗಳು ಭಾಗವಹಿಸಿದರು.

# ಸುತ್ತಮುತ್ತ

### ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿ

ಡೊಂಬಿವಿಲಿಯ ಶ್ರೀ ವಿದ್ಯಾಧರ ಮುತಾಲಿಕ ದೇಸಾಯಿಯವರ ಚೊಚ್ಚಲ ಕಥಾ ಸಂಕಲನ 'ಕೊಡಗಿನ ಕೋಳಿ ನುಂಗಿತ್ತಾ'ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕೆ. ವಿ. ರತ್ನಮ್ಮ ದತ್ತಿನಿಧಿ ಪ್ರಶಸ್ತಿ ಸಿಕ್ಕಿರುವ ಸಂದರ್ಭದಲ್ಲಿ ನೇಸರು ಅಭಿನಂದನೆ ಸಲ್ಲಿಸಲು ಸಂತೋಷ ಪಡುತ್ತದೆ.

ಅವರ ಹಲವು ಕಥೆ ಕವಿತೆಗಳು, ಒಳನಾಡ, ಹೊರನಾಡ ಕನ್ನಡ ಪತ್ರಿಕೆಗಳು ನಡೆಸಿರುವ ಸ್ಪರ್ಧೆಯಲ್ಲಿ ಬಹುಮಾನ ಪಡೆದಿವೆ. ಪ್ರಸ್ತುತ ದೇಸಾಯಿಯವರು ಠಾಣೆ ಜಿಲ್ಲೆಯ ಆದಿಶಕ್ತಿ ಕನ್ನಡ ಶಾಲೆಯಲ್ಲಿ ಶಿಕ್ಷಕೇತರ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಜ್ಞಾನದ ವಿಕೇಂದ್ರೀಕರಣವನ್ನು ಮಾಡಿದವರು ಹರಿದಾಸರು

**- ಶ್ರೀ ವಿಶ್ವೇಶ ತೀರ್ಥ ಶ್ರೀಪಾದರು**

ದಾಸತ್ವ ಗುಲಾಮನನ್ನಾಗಿ ಮಾಡಿಲ್ಲ ಲಲಾಮನನ್ನಾಗಿ ಮಾಡಿದೆ. ಭಕ್ತಿ ಕರ್ತವ್ಯ ಶಕ್ತಿಯನ್ನು ಬೆಳೆಸುತ್ತದೆ. ಕರ್ತವ್ಯ ಮಾಡಿದಲ್ಲಿ ಮಾತ್ರ ಬದುಕಲು ಅರ್ಹತೆ. ದಾಸಸಾಹಿತ್ಯದಿಂದ ನಮ್ಮ ಸಮಾಜಕ್ಕೆ ಯಾವ ಕುಂದೂ ಬಂದಿಲ್ಲ. ಜ್ಞಾನದ ವಿಕೇಂದ್ರೀಕರಣವನ್ನು ಮಾಡಿದವರು ಹರಿದಾಸರು. ಅದು ಸಮಾಜದ ದೃಷ್ಟಿಯನ್ನೂ, ಪರಮಾತ್ಮನ ಭಕ್ತಿಯನ್ನೂ ಬೆಳೆಸಿತು ಎಂದು ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಅಭಿಪ್ರಾಯ ಪಟ್ಟರು. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಮತ್ತು ಶ್ರೀಪಾದರ ಚಾತುರ್ಮಾಸ್ಯ ಸ್ವಾಗತ ಸಮಿತಿ ಜಂಟಿಯಾಗಿ ಆಯೋಜಿಸಿದ್ದ 'ದಾಸ ಸಾಹಿತ್ಯ - ಅವಲೋಕನ' ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ನಮ್ಮ ಜನರಲ್ಲಿ ಭಕ್ತಿಪಂಥ, ದಾಸಸಾಹಿತ್ಯದ ಕುರಿತು ಒಂದು ಕೀಳರಿಮೆ ಇದೆ. 'ಭಗವಂತನೇ ಸ್ವಾಮಿ ಎಂಬ ಭಾವನೆ ಬಿಡು. ಇಂತಹ ಗುಲಾಮಗಿರಿಗಿಂತ ಆತ್ಮನಾಶವೇ ಒಳ್ಳೆಯದು' ಎಂಬ ಭಾವನೆ ಇದೆ. ಆದರೆ ಈ ಶರಣಾಗತಿಯಿಂದ ಯಾವ ತೊಂದರೆಯೂ ಇಲ್ಲ. ಆತ್ಮದ ಉತ್ಕರ್ಷಕ್ಕೆ ಇದು ಕಾರಣವಾಗುತ್ತದೆ.

ಆದರೆ ಯಾರಿಗೆ ಶರಣಾಗುವುದು? ದೇವರು ಎಂದರೆ ಯಾರು? ಎಂಬ ಪ್ರಶ್ನೆ ಏಳಬಹುದು. ಎಲ್ಲಾ ಉದಾತ್ತಗುಣಗಳ ಸಮುದಾಯವೇ ದೇವರು ಭಗವಂತನಿಗೆ ದಾಸನಾಗುವುದೆಂದರೆ ಎಲ್ಲಾ ಉದಾತ್ತ ಗುಣಗಳಿಗೆ ದಾಸನಾಗುವುದು ಯಾರು ಭಗವಂತನಿಗೆ ಅರ್ಪಿಸಿಕೊಳ್ಳುತ್ತಾರೋ ಅದು ಉದಾತ್ತ ಗುಣಗಳಿಗೆ ಅರ್ಪಿಸಿಕೊಂಡಂತೆ. ನಾವು ಸ್ವಾರ್ಥಕ್ಕೆ ದಾಸರಾಗುತ್ತಿರೋ ಅಥವಾ ಭಗವಂತನಿಗೆ ದಾಸನಾಗುತ್ತಿರೋ? ಭಗವಂತನ ದಾಸನಾದವನಿಗೆ ಇತರರಿಗೆ ದೀನನಾಗಿ ಬಾಳುವ ಕೆಲಸ ಬರುವುದಿಲ್ಲ. ಭಕ್ತನಾದವನು ಇತರರನ್ನು ಬೇಡುವುದಿಲ್ಲ. ಬೇಡುವುದಿದ್ದರೆ ಅದು ಭಗವಂತನನ್ನು ಮಾತ್ರ ಎಲ್ಲರೊಳಗೆ ಭಗವಂತನನ್ನು ಕಂಡು ಸತ್ಕರಿಸಿದರೆ ಅದು ಭಗವಂತನನ್ನೇ ಪೂಜಿಸಿದಂತೆ.

ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಎಲ್ಲಾ ಕಡೆ ಒಂದೇ ಕಾಲದಲ್ಲಿ ಸಂತರು ಕಾಣಿಸಿಕೊಂಡರು. ಕಾರಣವೆಂದರೆ ಭಾರತದ ಮೇಲಾಗುತ್ತಿದ್ದ ವಿದೇಶ ಆಕ್ರಮಣ. ಆ ಸಮಯದಲ್ಲಿ ಮನೆಮನೆಗೆ ಕೇರಿ ಕೇರಿಗೆ ತಿರುಗಿ ಸಾಂಸ್ಕೃತಿಕ ಜಾಗೃತಿಯನ್ನುಂಟುಮಾಡಿದ ಕೀರ್ತಿ ಹರಿದಾಸರಿಗೆ ಸಲ್ಲಬೇಕು ಎಂದು ಅವರು ಅಭಿಪ್ರಾಯ ಪಟ್ಟರು.

ಕಿರಿಯ ಸ್ವಾಮೀಜಿಯವರು ಮಾತನಾಡುತ್ತಾ ಭಕ್ತಿ ಸಾಹಿತ್ಯ ಹೀಗೆ ಆತ್ಮ ಉತ್ಕರ್ಷಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು. ಆಧ್ಯಾತ್ಮಿಕ ಪ್ರಪಂಚದಲ್ಲಿ ದಾಸರು ಮಾಡಿದಂತಹ ಕಾರ್ಯ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಕಾರ್ಯ ಇಂದು ನಾವು ಮಾಡಿದರೆ ಸಮಾಜ ಖಂಡಿತಾ ಸುಧಾರಣೆಯಾಗಬಹುದ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ವಿಭಾಗದ ಮುಖ್ಯಸ್ಥ ಡಾ. ತಾಳ್ತಜೆ ವಸಂತಕುಮಾರ ಅವರು ವೈರುಧ್ಯವಿಲ್ಲದ ಬದುಕು ದಾಸರದು. ಭಾರತೀಯ ಸಂಸ್ಕೃತಿಯ ತವನಿಧಿಯೆನಿಸಿದ ದಾಸಸಾಹಿತ್ಯ ಉಪೇಕ್ಷೆಗೊಳಗಾದ

ಸಾಹಿತ್ಯ ಪ್ರಕಾರವಾಗಿದೆ. ಮುಕ್ತ ಮನಸ್ಸಿನಿಂದ ಈ ಸಾಹಿತ್ಯ ಪ್ರಕಾರವನ್ನು ಅಧ್ಯಯನ ಮಾಡಬೇಕಾದ ಅನಿವಾರ್ಯತೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು.

ಪ್ರಬಂಧ ಮಂಡಿಸಿದ ಡಾ. ಸುನೀತಾ ಶೆಟ್ಟಿಯವರು ಸುಧಾರಿತ ಸಾಮಾಜಿಕ ಚೌಕಟ್ಟನ್ನು ಇಟ್ಟುಕೊಂಡು ದಾಸಸಾಹಿತ್ಯ ಅಧ್ಯಯನವನ್ನು ಮಾಡಬೇಕೆಂದು ಒತ್ತಿ ಹೇಳಿದರು. ದಾಸ ಸಾಹಿತ್ಯ ಸಾಮಾಜಿಕ ಮೌಲ್ಯಗಳ ಕಡೆ ಮುಖ ಮಾಡಿದ ರೀತಿಯನ್ನು ರಘೋತ್ತ ಮಾಚಾರ್ಯ ಅವರು ವಿವರಿಸಿದರು. ಪ್ರಹ್ಲಾದಾಚಾರ್ಯ ನಾಗರಹಳ್ಳಿ, ಅವರು ನಿರ್ಭಯತೆ ಇದ್ದರೆ ಮಾತ್ರ ಒಂದು ಸಂಸ್ಕೃತಿ ಉಳಿಯುತ್ತದೆ ಎಂದರು. ಡಾ. ಟಿ. ವಿ. ನಾಯಕ್ ಅವರು ಮಹಾರಾಷ್ಟ್ರದಲ್ಲಿ ಭಕ್ತಿಪಂಥ ನಡೆದು ಬಂದ ಬಗೆಯನ್ನು ತೌಲನಿಕವಾಗಿ ವಿವರಿಸಿದರು. ಅನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಶ್ರೀ ಪ್ರಕಾಶ ರಾವ್, ಶ್ರೀಮತಿ ರಮಾಕೃಷ್ಣ, ಡಾ. ಮಣಿಮಾಲಿನಿ, ವಿ. ಕೆ., ಕೆ. ವಿ. ಕೃಷ್ಣರಾವ್, ವಿನಾಯಕ ಜೋಶಿ ಮೊದಲಾದವರು ಪಾಲ್ಗೊಂಡರು. ವಿಭಾಗದ ಉಪನ್ಯಾಸಕರಾದ ಡಾ. ಜಿ. ಎಸ್. ಉಪಾಧ್ಯ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ದಾಸರ ಗೀತೆಗಳನ್ನು ಇದೇ ಸಂದರ್ಭದಲ್ಲಿ ವಿಭಾಗದ ವಿದ್ಯಾರ್ಥಿನಿ, ಕು. ಪ್ರಜ್ಞಾ ಅಮ್ಮೆಂಬಳ ಮತ್ತು ವಿನಾಯಕ ಜೋಶಿಯವರು ಪ್ರಸ್ತುತ ಪಡಿಸಿದರು.

### ಲೇಖಕನಾದವನಿಗೆ ಭಾವದಾರಿದ್ರ್ಯ ಕೂಡದು - ಡಾ| ತಾಳ್ತಜೆ

ಲೇಖಕನಾದವನಿಗೆ ಭಾವ ದಾರಿದ್ರ್ಯ ಕೂಡದು. ದೊಡ್ಡ ವ್ಯಕ್ತಿಯಾಗಿ ಬೆಳೆಯಲು ಇರುವ ಅರ್ಹತೆಯೆಂದರೆ ದೊಡ್ಡದಾಗಿ ಯೋಚನೆ ಮಾಡುವುದು. ಪ್ರಬಲವಾದ ಇಚ್ಛಾ ಶಕ್ತಿಯಿದ್ದರೆ ಮಾತ್ರ ವ್ಯಕ್ತಿಯ ಬೆಳವಣಿಗೆ ಸಾಧ್ಯ - ಎಂದು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಆಯೋಜಿಸಿದ್ದ ಸಾಹಿತಿ ಶ್ರೀನಿವಾಸ ಜೋಕಟ್ಟೆಯವರ ವಿದಾಯ ಕೂಟ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರ್ ಅವರು ಅಭಿಪ್ರಾಯಪಟ್ಟರು.

ನುಡಿಯ ಬಗೆಗಿನ ಋಣ ತೀರಿಸುವ ಶಕ್ತಿ ಪ್ರತಿಯೊಬ್ಬ ಲೇಖಕನದಾಗಬೇಕು. ಪ್ರಾಂಜಲ ಮನಸ್ಸಿನಿಂದ ಬರೆಯುವ ಲೇಖಕರು ಇಂದು ಬಹಳ ಅಪರೂಪವಾಗಿದ್ದಾರೆ. ಸಾಹಿತ್ಯ ವಲಯದಲ್ಲಿ ತನ್ನ ಬರವಣಿಗೆಯ ಮುಖಾಂತರ ಅನನ್ಯತೆಯನ್ನು ಉಳಿಸಿಕೊಂಡು ಬರುತ್ತಿರುವ ಶ್ರೀನಿವಾಸ ಜೋಕಟ್ಟೆಯವರ ಸಾಹಿತ್ಯ ಕೃಷಿ ಇನ್ನಷ್ಟು ಹುಲುಸಾಗಿ ಬೆಳೆಯಲು ಎಂದು ಈ ಸಂದರ್ಭದಲ್ಲಿ ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜೋಕಟ್ಟೆಯವರು ಮಾತನಾಡುತ್ತಾ ಯಾವುದೇ ಸಾಹಿತ್ಯ ಪ್ರಕಾರವಾಗಿರಲಿ, ಅದರಲ್ಲಿ ಮಾನವೀಯತೆ ಇರಬೇಕು. ಸೃಜನಶೀಲ ಮನಸ್ಸು ಬದುಕಿನ ಎಲ್ಲಾ ಬೇಲಿಯನ್ನು ಹಾರುತ್ತದೆ. ಪತ್ರಿಕೋದ್ಯಮ ಮತ್ತು ಸಾಹಿತ್ಯ ಎಂಬ ಎರಡು ದೋಣಿಯಲ್ಲಿರುವ ನನ್ನನ್ನು ನೀವು ಸಾಹಿತಿ ಎಂದು ಕರೆಯುವ ಮೂಲಕ ನನ್ನ ಜವಾಬ್ದಾರಿ ಹೆಚ್ಚಿಸಿದಿರಿ ಎಂದು ಅಭಿಪ್ರಾಯ ಪಟ್ಟರು.

ವಿಭಾಗ ಮುಖ್ಯಸ್ಥರಾದ ಡಾ. ತಾಳ್ತಜೆಯವರು ಜೋಕಟ್ಟೆಯವರನ್ನು ಶಾಲು ಹೊದಿಸಿ ಸನ್ಮಾನಿಸಿದರು. ಡಾ. ವಿ. ಕೆ. ಮಣಿಮಾಲಿನಿ ಹಾಗೂ ಶ್ರೀ ವಿನಾಯಕ ಜೋಶಿಯವರು ಜೋಕಟ್ಟೆಯವರನ್ನು ಕುರಿತು ಮಾತನಾಡಿದರು. ಡಾ. ಜಿ. ಎನ್. ಉಪಾಧ್ಯ ಹಾಗೂ ಡಾ. ಸಂಜೀವ ಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

### ನವ ಮುಂಬಯಿಯಲ್ಲಿ ವಿಶ್ವವಿದ್ಯಾಲಯದ ಕನ್ನಡ ಸಟಿಫಿಕೇಟ್ ಕೋರ್ಸ್ ಆರಂಭ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ನಡೆಸುತ್ತಿರುವ ಕನ್ನಡ ಸರ್ಟಿಫಿಕೇಟ್ ಕೋರ್ಸ್ ತರಗತಿಗಳನ್ನು ಇದೇ ಮೊದಲಬಾರಿಗೆ ನವಮುಂಬಯಿಯ ಕನ್ನಡ ಸಂಘದಲ್ಲಿ ಇತ್ತೀಚೆಗೆ ಉದ್ಘಾಟಿಸಲಾಯಿತು.

ಈ ತರಗತಿಗಳನ್ನು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಉಪನ್ಯಾಸಕ, ಡಾ. ಜಿ. ಎನ್. ಉಪಾಧ್ಯ ಅವರು ಉದ್ಘಾಟಿಸಿ ಇದರ ಉದ್ದೇಶಗಳನ್ನು ವಿವರಿಸಿ ಮಾತನಾಡಿದರು. ವಿಶ್ವವಿದ್ಯಾಲಯಗಳು ದ್ವೀಪಗಳಾಗಬಾರದು. ಎಲ್ಲ ಸಮಾಜ ಬಾಂಧವರೊಂದಿಗೆ ಅದು ನಿಕಟವಾದ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಭಾಷಾ ಸೌಹಾರ್ದವನ್ನು ಕಾಪಾಡಿಕೊಂಡು ಬರುವಲ್ಲಿ ಇಂಥ ಕೋರ್ಸ್‌ಗಳು ಸ್ನೇಹ ಸೇತುವಾಗಿ ಕೆಲಸ ಮಾಡಬಲ್ಲವು ಎಂದವರು ನುಡಿದರು.

ಶ್ರೀಮಂತವಾದ ಭಾರತೀಯ ಭಾಷೆ, ಸಾಹಿತ್ಯ ಸಂಸ್ಕೃತಿಗಳನ್ನು ಅಭ್ಯಾಸ ಮಾಡಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರಲ್ಲದೇ ಕನ್ನಡ ಸಾಹಿತ್ಯ ವೈಶಿಷ್ಟ್ಯವನ್ನು ಸೋದಾಹರಣವಾಗಿ ವಿವರಿಸಿದರು.

ನವ ಮುಂಬಯಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಬಿ. ಎನ್. ಎಲ್. ರಾವ್ ಅವರು ಮಾತನಾಡಿ ಭಾರತೀ ವಿದ್ಯಾಭವನದ ಆಶ್ರಯದಲ್ಲಿ ಸಂಸ್ಕೃತ ತರಗತಿಗಳನ್ನು ಸಂಘವು ಅನೇಕ ವರ್ಷಗಳಿಂದ ನಡೆಸಿಕೊಂಡು ಅವಕಾಶ ಮಾಡಿಕೊಟ್ಟಿರುವುದು ಸಂತೋಷದ ಸಂಗತಿ. ಕನ್ನಡ ಜಾಗೃತಿಯನ್ನು ಈ ಭಾಗದಲ್ಲಿ ಮೂಡಿಸಲು ಇದು ಸಹಾಯಕಾರಿಯಾಗಲಿ ಎಂದು ಹಾರೈಸಿದರು.

ಸಂಘದ ಕಾರ್ಯದರ್ಶಿ ಶ್ರೀ ವೈ. ಕೆ. ರಾವ್ ಅವರು ಮಾತನಾಡಿ ಭಾಷೆ ಸಹ ಒಂದು ಸಂಪತ್ತು ಇದ್ದ ಹಾಗೆ. ನಮ್ಮ ಜ್ಞಾನದ ಪರಿಧಿಯನ್ನು ಇವು ವಿಸ್ತರಿಸಬಲ್ಲವು. ಜನ ಸಾಮಾನ್ಯರೊಂದಿಗೆ ಹೆಚ್ಚು ಸಂಪರ್ಕವಿಟ್ಟುಕೊಂಡರೆ ಒಂದು ಭಾಷೆಯನ್ನು ಬಹುಬೇಗ ಕಲಿಯಲು ಸಾಧ್ಯ ಎಂದರು. ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳೂ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಸಂಘದ ಮಾಜಿ ಅಧ್ಯಕ್ಷ ಶ್ರೀ ಎ.ವಿ. ಶೆಟ್ಟಿ, ಕೋಶಾಧಿಕಾರಿ, ಶ್ರೀ ಬಿ. ಎಚ್. ಕಟ್ಟಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ವೈ. ಕೆ. ರಾವ್ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ಮುಂಬಯಿ ಮೊಗವೀರ ಮಾಸಿಕದ ವಜ್ರಮಹೋತ್ಸವ ನಿಮತ್ತ ಕಥೆ ಮತ್ತು ಲೇಖನ ಸ್ಪರ್ಧೆ

ಮುಂಬಯಿ : ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯ ಕಳೆದ 60 ವರ್ಷಗಳಿಂದ ನಿರಂತರ ಪ್ರಕಟಣೆ ಮಾಡುತ್ತಿರುವ 'ಮೊಗವೀರ' ಮಾಸಿಕದ ವಜ್ರಮಹೋತ್ಸವ ಆಚರಣೆಯ ಹಿನ್ನೆಲೆಯಲ್ಲಿ ಕನ್ನಡ ಕಥೆ ಮತ್ತು ಲೇಖನ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಪತ್ರಿಕೆಯ ಸಂಪಾದಕ ಅಶೋಕ ಸುವರ್ಣ ಪ್ರಕಟಣೆಯೊಂದರ ಮೂಲಕ ತಿಳಿಸಿದ್ದಾರೆ.

ಕಥೆ ಯಾ ಲೇಖನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ರೂ. 1000/-, ದ್ವಿತೀಯ ರೂ. 750/- ಮತ್ತು ರೂ. 500/- ಹಾಗೂ ರೂ. 250/-ರಂತೆ ಪ್ರೋತ್ಸಾಹಕರ ಬಹುಮಾನಗಳನ್ನು ಇರಿಸಲಾಗಿದೆ.

ಈ ಸ್ಪರ್ಧೆಗೆ ಕಳುಹಿಸಬೇಕಾದ ಕಥೆ ಯಾ ಲೇಖನಗಳು ಹಿಂದೆ ಎಂದೂ ಪ್ರಕಟಣೆಗೊಂಡಿರಬಾರದು. ಬರಹಗಳು 10

ಪುಟಗಳನ್ನು ಮೀರಬಾರದು. ಕಾಗದದ ಒಂದೇ ಮಗ್ಗುಲಲ್ಲಿ ಬರೆದಿರಬೇಕು. ಝೆರಾಕ್ಸ್ ಪ್ರತಿಗಳನ್ನು ಕಳುಹಿಸಬಾರದು. ಲೇಖಕರು ಯಾ ಕಥೆಗಾರರು ತಮ್ಮ ಹೆಸರು ವಿಳಾಸ, ಭಾವಚಿತ್ರವನ್ನು ಪ್ರತ್ಯೇಕವಾಗಿ ಲಗ್ತೀಕರಿಸಬೇಕು. ಲೇಖನವು ರಾಜಕೀಯ ಕ್ಷೇತ್ರವನ್ನು ಹೊರತು ಪಡಿಸಿ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ, ಶೈಕ್ಷಣಿಕ, ವಿದ್ಯಮಿಕ ಮೊದಲಾದ ವೈಚಾರಿಕ ಕ್ಷೇತ್ರಕ್ಕೆ ಸಂಬಂಧಿಸಿರಬೇಕು ಎಂಬ ನಿಯಮಗಳು ಇವೆ ಎಂದೂ ಕಥೆ ಮತ್ತು ಲೇಖನಗಳು ಸಂಪಾದಕರ ಈ ಕೆಳಗಿನ ವಿಳಾಸಕ್ಕೆ 1999ರ ಅಕ್ಟೋಬರ್ 30 ರೊಳಗೆ ತಲುಪಬೇಕೆಂದು ವಿನಂತಿಸಿಕೊಂಡಿದ್ದಾರೆ. The Editor 'Mogaveera' Kannada Monthly, 8, Nanabhai Lane, Fort, Mumbai-400 001. (ಸಂಪಾದಕ, ಮೊಗವೀರ ಮಾಸಿಕ, 8, ನಾನಾ ಬ್ಯಾ ಲೇನ್, ಫೋರ್ಟ್, ಮುಂಬಯಿ-400 001)

### ಮಾನವೀಯ ಮೌಲ್ಯದ ಅಸಾಮಾನ್ಯ ತೀರ್ಪು

ನಿಸರ್ಗದಲ್ಲಿ ಕೆಲವು ನಿಯಮಗಳೂ ಹಾಗೂ ಕಟ್ಟುಪಾಡುಗಳಿವೆ. ಮಾನವ ತಾನು ಪ್ರಗತಿ ಪಥದಲ್ಲಿ ದಾಪುಗಾಲಿಡಲು ಹವಣಿಸುತ್ತಿರುವಾಗ ಪ್ರಕೃತಿಯು ಅಣಕವೋ ಎಂಬಂತೆ 'ಏಡ್ಸ್' ಎಂಬ ಭೀಕರ ವ್ಯಾಧಿಯ ಮುನ್ಸೂಚನೆಗಳು ಈಗಾಗಲೇ ತೋರಿ ಬಂದಿವೆ. ಇಪ್ಪತ್ತೊಂದನೆಯ ಶತಮಾನಕ್ಕೆ ಅಡಿ ಇರಿಸುತ್ತಿದ್ದೇವೆ ಎಂದು ಹರ್ಷಿಸುವಂತಿಲ್ಲ. ಮಾನವಕುಲ ಜೀವ ಭಯದಿಂದ ತತ್ತರಿಸುವಂತೆ ತನ್ನ 'ಆಕ್ಟೋಪಸ್' ಹಿಡಿತದಿಂದ ಮನುಕುಲಕ್ಕೆ ಕಂಟಕವಾಗಿದೆ ಎಂದರೆ ಅತಿಶಯೋಕ್ತಿಯಾಗದು. 'ಏಡ್ಸ್' ಸಾಂಕ್ರಾಮಿಕ ರೋಗವಾಗಿ ಹರಡಿ ಮೂರನೆಯ ಹಂತಕ್ಕೆ ನಮ್ಮ ಭಾರತ ತಲುಪಿದೆ. ಇದು ಗುಣವಾಗುವ ಖಾಯಿಲೆ ಅಲ್ಲ. 1986ರಲ್ಲಿ ಕಾಣಿಸಿಕೊಂಡ ಈ ಖಾಯಿಲೆ ಅನೇಕ ಕಡೆಗಳಲ್ಲಿ ಪಸರಿಸಿದೆ. ಮುಂಬೈನಲ್ಲಿ ಜನಸಂಖ್ಯೆ ಜಾಸ್ತಿ ಇರುವುದರಿಂದ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿದೆ.

ದಾರಿ ಕಾಣದ ಈ ಅಂಧಕಾರದಲ್ಲಿ ಒಂದು ಬೆಳಕಿನ ಕಿರಣವೋ ಎಂಬಂತೆ ಇತ್ತೀಚೆಗೆ ಭಾರತದ ಸರ್ವೋಚ್ಚ ನ್ಯಾಯಾಲಯ ಹೊರಡಿಸಿದ ತೀರ್ಪಿನ ಮೇರೆಗೆ ಎಚ್.ಐ.ವಿ. (H.I.V.) ವೈರಾಣುವನ್ನು ಶರೀರದಲ್ಲಿ ಅಡಗಿಸಿಕೊಂಡು ಮದುವೆ ಮಾಡಿಕೊಳ್ಳಲು ಮುಂಬರುವ ವ್ಯಕ್ತಿ ಶಿಕ್ಷಾರ್ಹ ಅದು ಘೋರ ಅಪರಾಧವೆಂದು ಪರಿಗಣಿಸಲಾಯಿತು. ರೋಗಿಯ ಸ್ವಾತಂತ್ರ್ಯಕ್ಕೆ ರೋಗಿಯ ರೋಗದ ರಹಸ್ಯಗಳನ್ನು ಕಾಪಾಡಬೇಕಾದ ವೈದ್ಯನ ನೈತಿಕ ಹೊಣೆ ಮುಂತಾದ ಗೋಜಲುಗಳನ್ನು ಗಣನೆಗೆ ತಂದುಕೊಳ್ಳದೆ ಈ ತೀರ್ಪು ನೀಡಿದ ನ್ಯಾಯಾಧೀಶರಿಗೆ ನಮ್ಮ ನಮನಗಳನ್ನು ಸಲ್ಲಿಸಬೇಕು.

ದಿಗಿಲು ಹುಟ್ಟಿಸುವ ವಿಷಯವೆಂದರೆ 17-18 ಪ್ರಾಯದ ಯುವಕ - ಯುವತಿಯರು ನವದಂಪತಿಗಳು ಈ ಖಾಯಿಲೆಗೆ ಬಲಿಯಾಗುತ್ತಿರುವುದು. ಈ ಖಾಯಿಲೆಗೆ ಚಿಕಿತ್ಸೆ ಇಲ್ಲ. ಈ ವ್ಯಾಧಿಗೆ ತುತ್ತಾದವರನ್ನು ಸಮಾಜ ಕಡೆಗಣಿಸ ಬೇಕೆಂದರ್ಥವಲ್ಲ. ಅವರನ್ನು ಅನುಕಂಪದಿಂದ ನೋಡಿ ಅವರ ಉಳಿದ ಜೀವನವನ್ನು ಸಮಾಜದ ಮತ್ತಿತರರಂತೆ ಜೀವಿಸಲು ಅನುವು ಮಾಡಿಕೊಡಬೇಕಾದುದು ಮಾನವ ಧರ್ಮ. ಆದರೆ ಈ ರೋಗಾಣು ಹೊತ್ತವರು ತಮ್ಮ ಹೊಣೆಯನ್ನು ಅರಿತು ಎಚ್ಚೆತ್ತುಕೊಳ್ಳುವ ಕಾಲ ಬಂದಿದೆ. ಇದು ಒಂದು ರೀತಿಯ ವಿಷವರ್ತುಲ, ಸಮಾಜದ ದೂಷಣೆಗೆ ಹೆದರಿ ತಪ್ಪು ತನ್ನಲ್ಲಿದೆ ಎಂದು ತಿಳಿದಿದ್ದರೂ ರಾಕ್ಷಸನಾಗಿ ಮತ್ತೊಂದು ಜೀವವನ್ನು ನರಕಕ್ಕೆ ತಳ್ಳುವುದಕ್ಕೆ ಸಹ ನಾಚುವುದಿಲ್ಲ.

ಆದ್ದರಿಂದ ಕನ್ಯೆಯ ಮಾತಾಪಿತರು ಎಚ್ಚೆತ್ತುಕೊಳ್ಳಬೇಕು. ತಮ್ಮ ಮಗಳನ್ನು ಭಾರವೆಂದು ಭಾವಿಸದೆ, ಕನ್ಯಾಸೆರೆ ಬಿಡಿಸಿಕೊಳ್ಳಬೇಕೆಂದು ಅವಸರ ಪಡದೆ, ಕೇವಲ 'ವರ'ನ ವಿದ್ಯಾರ್ಹತೆ, ಉದ್ಯೋಗ, ಹೊರ ಸೌಂದರ್ಯಕ್ಕೆ ಮಾರು ಹೋಗದೆ, ಜಾತಕ ಜಾತಿ ಎಂದು ಹೆಚ್ಚು ಪ್ರಾಶಸ್ತ್ಯ ನೀಡದೆ ವರನನ್ನು ಕಡ್ಡಾಯ ರಕ್ತ ಪರೀಕ್ಷೆಗೊಳಪಡಿಸಿ ಮಗಳನ್ನು ಸಂತೋಷವಾಗಿ ವಿವಾಹಮಾಡಿಕೊಡಬೇಕು. ಎಲ್ಲರೂ ಒಗ್ಗಟ್ಟಾಗಿ, ಒಕ್ಕೊರಲಿನಿಂದ ಒಮ್ಮತದಿಂದ ನಡೆದುಕೊಂಡಿದ್ದೇ ಆದರೆ ಎಷ್ಟೋ ಹೆಣ್ಣು ಮಕ್ಕಳ ಬಾಳು ಹಸನಾಗುವುದು. ಈ ಪಿಡುಗನ್ನು ನಿಯಂತ್ರಿಸಲು ಒಂದೇ ಮಾರ್ಗವೆಂದರೆ ಮತ್ತೊಬ್ಬ ಪಂಡಿತ ಮಾನವತಾವಾದಿ ನ್ಯಾಯಾಧೀಶ ಸರ್ವೋಚ್ಚ ನ್ಯಾಯಾಲಾಯದ ಪೀಠವನ್ನಲಂಕರಿಸಿ ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು ಕಡ್ಡಾಯವಾಗಿ ರಕ್ತ ಪರೀಕ್ಷೆ ಮಾಡಿಸಿಕೊಂಡು ಕಾನೂನು ಸಮ್ಮತ ಪ್ರಮಾಣ ಪತ್ರವನ್ನು ಪಡೆಯಬೇಕು ಎಂಬ ಆದೇಶ ಹೊರಡಿಸಿದ್ದೇ ಆದರೆ ಎಷ್ಟೋ ಬಲಿಪಶುಗಳನ್ನು ಕಾಪಾಡಿದಂತಾಗುತ್ತದೆ. ಕೇವಲ ಭಾಷಣಗಳಿಂದಲ್ಲ, ಸಮಾಜವನ್ನು ಕಾಪಾಡುವ 'ಕಾನೂನು' ಬರಲೆಂದು ಕಾಯುತ್ತಿದ್ದೇವೆ.

-- ಶ್ರೀಮತಿ ವನಜಾ ರಾಜನ್

### ಕನ್ನಡ ಕುಲಕೋಟಿ ಟ್ರಸ್ಟ್ ಸ್ಥಾಪನೆ

ಮುಂಬಯಿ, ಸೆ. 12 - ಕನ್ನಡಕ್ಕಾಗಿ ದುಡಿಯುತ್ತಿರುವ ಕೆಲವು ಜನ ಸೇರಿ ಕನ್ನಡ ಸಂಸ್ಕೃತಿ ಸಾಹಿತ್ಯ, ಕನ್ನಡ ನುಡಿಯ ಹೆಗ್ಗಳಿಕೆಯನ್ನು ಕನ್ನಡ ಜನತೆ ಎಲ್ಲಿದ್ದರೂ ಅಲ್ಲಿಗೆ ಮುಟ್ಟಿಸಿ ಅಭಿಮಾನವನ್ನು ಬಡಿದೆಬ್ಬಿಸುವ ಉದ್ದೇಶದಿಂದ ಹೊಸತಾದ ಸಂಸ್ಥೆಯನ್ನು ರೂಪಿಸಿದ್ದಾರೆ. ಅದೇ 'ಕನ್ನಡ ಕುಲಕೋಟಿ ಟ್ರಸ್ಟ್' ಸಾಕಷ್ಟು ವಿಚಾರ ಮಂಥನದ ಪರಿಣಾಮವಾಗಿ ಮೂಡಿ ಬಂದಿದೆ. ಈ ಕನ್ನಡ ಕುಲಕೋಟಿ ಟ್ರಸ್ಟ್.

ಇತ್ತೀಚೆಗೆ ಈ ಟ್ರಸ್ಟಿನ ಸೂತ್ರ ವಹಿಸಿದ ಲಿಂಗರಾಜ ಪಾಟೀಲರು ಸಭೆ ಕರೆದು ಇದಕ್ಕೊಂದು ರೂಪು ಕೊಟ್ಟಿದ್ದಾರೆ. ಕನ್ನಡ ಮಕ್ಕಳಲ್ಲಿ ಎಳವೆಯಲ್ಲಿಯೇ ಕನ್ನಡ ನುಡಿಯ ಬಗ್ಗೆ ಪ್ರೀತಿ, ಅಭಿಮಾನ ಮೂಡಿಸುವುದು. ಕನ್ನಡ ಜನತೆ ತಮ್ಮ ಭಾಷೆ ಹಾಗೂ ಸಂಸ್ಕೃತಿಯ ಹೆಗ್ಗಳಿಕೆಯನ್ನು ಮರೆತು ಅಭಿಮಾನ ಶೂನ್ಯರಾಗಿದ್ದಾರೆ. ಅವರಿಗೆ ಕಣ್ತೆರೆಯುವಂತೆ ಮಾಡುವುದು ಭೌಗೋಳಿಕ ಮಿತಿಗಳನ್ನು ದಾಟಿ ಕನ್ನಡದ ಕಂಪನ್ನು ಬೀರುವುದೇ ಇದರ ಉದ್ದೇಶವಾಗಿದೆ. ಅದಕ್ಕಾಗಿ ಸಾಹಿತ್ಯ ಪ್ರಕಾಶನ, ಪ್ರಕಟಣೆಗಳು, ಭಿತ್ತಿ ಪತ್ರ, 'ವೆಬ್ ಸಾಯಿಟ್' (ಇಂಟರ್‌ನೆಟ್ ಮೂಲಕ) ಮುಂತಾದ ಮಾಧ್ಯಮಗಳನ್ನು ಆಯ್ದುಕೊಳ್ಳಲಿದೆ. ಹಂತಗಳಲ್ಲಿ ಈ ಉದ್ದೇಶಗಳನ್ನು ಈಡೇರಿಸಲಾಗುವುದು ಈ ಟ್ರಸ್ಟಿನ ಪದಾಧಿಕಾರಿಗಳನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಗಿದೆ.

ಶ್ರೀಮತಿ ಆಯಾ ಪಾಟೀಲ್ (ಟ್ರಸ್ಟಿ ಹಾಗೂ ಕಾರ್ಯಾಧ್ಯಕ್ಷರು), ಡಾ| ಗಿರಿಜಾ ಶಾಸ್ತ್ರಿ (ಗೌ| ಪ್ರಧಾನ ಕಾರ್ಯದರ್ಶಿ), ಕೆ. ಬಸವರಾಜ (ಟ್ರಸ್ಟಿ ಹಾಗೂ ಕೋಶಾಧಿಕಾರಿ), ಸೋಮನಾಥ ಕರ್ಕೇರಾ, ಕಾರ್ಯದರ್ಶಿ (ಪತ್ರಿಕೆ ಸಾರ್ವಜನಿಕ ಸಂಪರ್ಕ ವಿಭಾಗ), ಕುಮಾರಿ ಕುಸುಮ ಅಮೀನ್ ಕಾರ್ಯದರ್ಶಿ (ಪ್ರಕಾಶನಾ ವಿಭಾಗ), ಕುಸುಮ ಸುರೇಶ ಕುಂದರ್ ಕಾರ್ಯದರ್ಶಿ (ಸಾಹಿತ್ಯ, ಸಂಸ್ಕೃತಿ ವಿಭಾಗ), ಲಿಂಗರಾಜ ಪಾಟೀಲ ಟ್ರಸ್ಟಿ (ಸಹ ಸಂಚಾಲಕ ಹಾಗೂ ಸಂಪಾದಕ).

ಡಾ. ಕೆ. ರಘುನಾಥ, ಡಿ. ಎಮ್. ಅರ್ಜುನ್ ಹಾಗೂ ಶ್ರೀಮತಿ ವನಜಾರಾಜನ್ ವಿಶೇಷ ಆಹ್ವಾನಿತರಾಗಿ ಉತ್ತಮ ಸಲಹೆ ಸೂಚನೆ ನೀಡಿದರು.

ಕನ್ನಡ ಉಳಿವು ಉನ್ನತಿಗಾಗಿ ಸೇವೆ ಸಲ್ಲಿಸಬೇಕೆನ್ನುವ ಎಲ್ಲರಿಗೆ ಟ್ರಸ್ಟಿನಲ್ಲಿ ಸ್ವಾಗತವಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ನಂ. 5330339ಯನ್ನು ಸಂಪರ್ಕಿಸಿರಿ.

Regn. No. 040015/86
Regn. No. MH/by/NE121/99
Date of Posting : 10-10-99



# ಶಾಂತಾ ತುಪ್ಪ - ವಿದಾಯ

'ವಂಶ ವೃಕ್ಷ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿ ಹಲವು ಕಲಾತ್ಮಕ ಚಿತ್ರಗಳಲ್ಲಿ ಪೋಷಕ ಪಾತ್ರ ನಿರ್ವಹಿಸಿರುವ ಶಾಂತಾ (ತುಪ್ಪ) ಮೂಲತಃ ಹವ್ಯಾಸಿ ರಂಗಭೂಮಿಗೆ ಮುಡಿಪಾಗಿದ್ದ ಕಲಾವಿದೆ. ಇತ್ತೀಚಿನವರೆಗೂ ನಾಟಕಗಳು ಹಾಗೂ ಟಿ. ವಿ. ಸರಣಿಗಳಲ್ಲಿ ಅಭಿನಯಿಸುತ್ತಿದ್ದ ಶಾಂತಾ ಅನಾರೋಗ್ಯದಿಂದ ಕಾಲವಶರಾದರು.

ಶಾಂತಾ ಅಭಿನಯಿಸಿದ ಚಿತ್ರಗಳ ಸಂಖ್ಯೆ ಕಡಿಮೆ. ಆದರೆ ತನ್ನ ಪ್ರೌಢ ಅಭಿನಯದಿಂದ ಒಳ್ಳೆಯ ಹೆಸರು ಗಳಿಸಿದ್ದರು. ಗಿರೀಶ್ ಕಾರ್ನಾಡ್ - ಬಿ. ವಿ. ಕಾರಂತ್ ಅವರ ನಿರ್ದೇಶನದ 'ವಂಶ ವೃಕ್ಷ' ಚಿತ್ರದಲ್ಲಿ ಶ್ರೋತ್ರಿಯರ (ವೆಂಕಟರಾವ್ ತಲಗೇರಿ) ಪತ್ನಿಯಾಗಿ ಅಭಿನಯಿಸಿ ಚಿತ್ರ ರಸಿಕರ - ವಿಮರ್ಶಕರ ಮೆಚ್ಚುಗೆ ಗಳಿಸಿದ ಶಾಂತಾ ಅಭಿನಯದ ಇತರ ಮುಖ್ಯ ಚಿತ್ರಗಳೆಂದರೆ ಎನ್ ಲಕ್ಷ್ಮೀನಾರಾಯಣ್ ನಿರ್ದೇಶನದ 'ಅಬಚೂರಿನ ಪೋಸ್ಟಾಫೀಸು' ಪ್ರಸಾದ್ ಅವರ 'ಕಂಕಣ' ಲಂಕೇಶ್ ಅವರ 'ಪಲ್ಲವಿ', ನಾಗಾಭರಣ ಅವರ 'ಗ್ರಹಣ' ಹಾಗೂ ಬ್ಯಾಂಕರ್ ಮಾರ್ಗಯ್ಯ ಗಿರೀಶ್ ಕಾಸರವಳ್ಳಿ ಅವರ 'ಘಟಶ್ರಾದ್ಧ' ಪ್ರೇಮಾ ಕಾರಂತ್‌ರ 'ಫಣಿಯಮ್ಮ' ಹಾಗೂ 'ಬ್ರಿಡ್ಜ್' ಸಿನಿಮಾಗಳು ಎನ್ನಬಹುದಾದಂಥ ಲೋಕೇಶ್ ನಿರ್ದೇಶನದ ಭುಜಂಗಯ್ಯನ ದಶಾವತಾರಗಳು' ಮತ್ತು ಅಮರ್ ದೇವ್ ಅವರು 'ಊರ್ವಶಿ'

ಶ್ರೀರಂಗರ 'ಸಂಜೀವಿನಿ' ನಾಟಕದಲ್ಲಿ ದೇವಯಾನಿಯಾಗಿ ಅಭಿನಯಿಸಿ ರಂಗ ಪ್ರವೇಶಿಸಿದ ಶಾಂತಾ 70ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದರು. ಅವುಗಳಲ್ಲಿ ಕೆಲವು 300ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿವೆ, ಕನ್ನಡವಲ್ಲದೆ ಇಂಗ್ಲಿಷ್ ನಾಟಕಗಳಲ್ಲೂ ಶಾಂತಾ ಅಭಿನಯಿಸಿದ್ದರು. ಆರ್. ಜಿ. ಕಾಮತ್ ಅವರ 'ಸಾಕ್ರಟೀಸ್', ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ' ಮತ್ತು 'ಸಂಗ್ಯಾ ಬಾಳ್ಯಾ' ಕೈಲಾಸಂ ಅವರ ನಾಟಕಗಳಲ್ಲಿ ತೆಂಡೂಲ್ಕರ್ ಅವರ ಶಾಂತತಾ ಕೋರ್ಟ್ ಚಾಲೂ ಹೈ (ಇಂಗ್ಲಿಷ್ ಮತ್ತು ಕನ್ನಡ) ಪ್ರಭಾತ್ ಕಲಾವಿದರ (ಸಿಂಡ್ರೆಲಾ), ಕುವೆಂಪು ಅವರ ಸ್ಮಶಾನ ಕುರುಕ್ಷೇತ', ಬಿ. ಎಂ. ಶ್ರೀ ಅವರ 'ಅಶ್ವತ್ಥಾಮ' ಹಾಗೂ ಜಿ. ಬಿ. ಜೋಷಿ ಅವರ 'ಸತ್ತವರ ನೆರಳು' ಶಾಂತಾ ಅಭಿನಯಿಸಿದ ಕೆಲವು ಮುಖ್ಯ ನಾಟಕಗಳು ಶಾಸ್ತ್ರೀಯ ಸಂಗೀತದಲ್ಲೂ ಆಸಕ್ತಿ - ಪರಿಶ್ರಮವಿದ್ದ ಶಾಂತಾ ಗೀತಾ ಮುತ್ತುಸ್ವಾಮಿ ದೀಕ್ಷಿತರು' ಹಾಗೂ 'ದಾಸ ಪುರಂದರ ನಾಟಕಗಳಲ್ಲಿ ಅಭಿನಯಿಸಿದ್ದರು.

ಶಾಂತಾ ಅವರ ರಂಗಭೂಮಿ ಒಲವಿಗೆ ಪ್ರೇರಣೆ ಅವರ ತಂದೆ ಬಿ. ಕೃಷ್ಣ. ಹವ್ಯಾಸಿ ರಂಗ ಚಳವಳಿ ಆರಂಭವಾಗುವುದಕ್ಕೆ ಬಹಳ ಮುಂಚೆಯೇ, ಅಂದರೆ 1920ರ ದಶಕದಲ್ಲೇ ಹಲವು ಇಂಗ್ಲಿಷ್ ಮತ್ತು ಕನ್ನಡ ನಾಟಕಗಳಲ್ಲಿ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಕೃಷ್ಣ, ಕುವೆಂಪು ಅವರ 'ಸತ್ಯವಾನ್ ಸಾವಿತ್ರಿ ನಾಟಕದಲ್ಲಿ ಸಾವಿತ್ರಿಯಾಗಿ ಹಾಗೂ ಕುವೆಂಪು ಅವರು ಸತ್ಯವಾನನಾಗಿ ಅಭಿನಯಿಸುತ್ತಿದ್ದರು. ಅರವತ್ತರ ದಶಕದಲ್ಲಿ ರಂಗಭೂಮಿಗೆ ಮುಡಿಪಾದ 'ರಂಗಮಂಟಪ' ತ್ರೈಮಾಸಿಕವನ್ನು ಪ್ರಕಟಿಸುತ್ತಿದ್ದರು.



ಸಹಜವಾಗಿಯೇ ಅವರ ಪುತ್ರಿಯರಾದ ಶಾಂತ ಮತ್ತು ಲಕ್ಷ್ಮಿ ಅವರುಗಳಲ್ಲಿ ರಂಗಭೂಮಿ ಆಸಕ್ತಿ ಬೆಳೆಯಿತು.

ಶ್ರೀರಂಗರು ಸ್ಥಾಪಿಸಿದ 'ಶಕ ಶೈಲೂಷರು' ನಾಟಕ ತಂಡಕ್ಕೆ ಒಂಬತ್ತು ವರ್ಷಗಳ ಕಾಲ ಅಧ್ಯಕ್ಷೆಯಾಗಿದ್ದ ಶಾಂತಾ ಉದ್ಯೋಗ ನಿಮಿತ್ತರಾಗಿ ಸರಳಾದೇವಿ ಹೈಸ್ಕೂಲಿನಲ್ಲಿ ಅಧ್ಯಾಪಕಿಯಾಗಿ 29 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

1994ರಲ್ಲಿ ನಾಟಕ ಅಕಾಡಮಿಯ ಪ್ರಶಸ್ತಿ 1996ರಲ್ಲಿ ಆರ್ಯಭಟ ಪ್ರಶಸ್ತಿಗಳನ್ನು ಗಳಿಸಿದ ಶಾಂತಾ ಅಭಿನಯಿಸುತ್ತಿದ್ದ ಕಟ್ಟಕಡೆಯ ಟಿ.ವಿ. ಧಾರವಾಹಿ 'ಮಾಯಾಮೃಗ'. 1972ರಲ್ಲಿ ನವದೆಹಲಿಯಲ್ಲಿ ನಡೆದ ಮೋಹನ್ ರಾಕೇಶ್ ಸ್ಮಾರಕ ನಾಟಕ ಸ್ಪರ್ಧೆಯಲ್ಲಿ ಶಾಂತಾ ನೇತೃತ್ವದ ಮಾಸ್ತಿ ಅವರ 'ಚಿಕವೀರ ರಾಜೇಂದ್ರ' ನಾಟಕಕ್ಕೆ ಪ್ರಥಮ ಬಹುಮಾನ. ಆಕಾಶವಾಣಿಯಲ್ಲಿ ಗ್ರೇಡೆಡ್ ಆರ್ಟಿಸ್ಟ್ ಆಗಿದ್ದ ಶಾಂತಾ ಅನೇಕ ಆಕಾಶವಾಣಿ ನಾಟಕಗಳಲ್ಲಿ ಅಭಿನಯಿಸಿ ಹೆಸರು ಮಾಡಿದ್ದರು. ತಮ್ಮ ತಂದೆಯವರ ನೆನಪಿಗಾಗಿ ಸುಚಿತ್ರಾ ಅಕಾಡೆಮಿಯಲ್ಲಿ ಪ್ರತಿವರ್ಷ ಜುಲೈ 16ರಂದು 'ಕೃಷ್ಣ ಸ್ಮರಣೆ' ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದರು.

ಇವರ ತಂಗಿ ಶ್ರೀಮತಿ ಲಕ್ಷ್ಮಿ ಸೀತಾರಾಂ ಮೈಸೂರು ಅಸೋಸಿಯೇಶನ್‌ನ ಕಲಾವಿಭಾಗದ ಸಕ್ರಿಯ ಕಾರ್ಯಕರ್ತೆಯಾಗಿರುತ್ತಾರೆ. ಅಸೋಸಿಯೇಶನ್ ಸಾದರ ಪಡಿಸಿದ ಅನೇಕ ನಾಟಕಗಳಲ್ಲಿ ಲಕ್ಷ್ಮೀ, ಅವರ ಮಗ ರಘುರಾಂ ಮತ್ತು ಮಗಳು ಅರ್ಚನ ಅಭಿನಯಿಸಿದ್ದಾರೆ.

## ನಾಟಕ ಪ್ರೋತ್ಸಾಹ ಯೋಜನೆಗೆ ಅರ್ಜಿ ಆಹ್ವಾನ

ಮುಂಬಯಿ : ಕರ್ನಾಟಕ ಸಂಘ ಮುಂಬಯಿಯ ಕನ್ನಡಿಗರ ನಾಟಕ ಸಂಘಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಂಘದಲ್ಲಿ ಪ್ರತಿ ಎರಡು ತಿಂಗಳಿಗೊಮ್ಮೆ ಕನ್ನಡ, ತುಳು, ಕೊಂಕಣಿ, ಕೊಡವ ಮುಂತಾದ ನಾಟಕಗಳ ಪ್ರದರ್ಶನ ಏರ್ಪಡಿಸಿ ಇದರಲ್ಲಿ ಮುಂಬಯಿಯ ವಿವಿಧ ನಾಟಕ ಸಂಸ್ಥೆಗಳ ನಾಟಕ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು ಮುಂಬಯಿಯ ನಾಟಕ ಸಂಸ್ಥೆಗಳಿಂದ ಅರ್ಜಿಗಳನ್ನು ಆಮಂತ್ರಿಸಿದೆ.

**ಯೋಜನೆ ರೂಪುರೇಷೆಗಳು ಈ ಕೆಳಗಿನಂತಿವೆ.**

1. ಈ ಯೋಜನೆಯಡಿಯಲ್ಲಿ ಪ್ರದರ್ಶನಗೊಳ್ಳುವ ಸಾಮಾಜಿಕ ನಾಟಕಗಳಿಗೆ ರೂ. 3000/- ಹಾಗೂ ಐತಿಹಾಸಿಕ ಹಾಗು ಪೌರಾಣಿಕ ನಾಟಕಗಳಿಗೆ ರೂ. 4000/- ಗಳನ್ನು ಸಂಭಾವನೆಯ ರೂಪದಲ್ಲಿ ಕೊಡಲಾಗುವುದಲ್ಲದೆ ಒಂದು ತಿಂಗಳು ನಾಟಕಾಭ್ಯಾಸಕ್ಕೆ ಸ್ಥಳಾವಕಾಶವನ್ನೂ ನೀಡಲಾಗುವುದು.
2. ನಾಟಕದ ಅವಧಿ ಕನಿಷ್ಠ ಎರಡು ಗಂಟೆಯದಾಗಿರಬೇಕು.
3. ಇದರಲ್ಲಿ ಪ್ರದರ್ಶಿಸಲ್ಪಡುವ ನಾಟಕವನ್ನು ಆ ತಂಡ ಈ ಮೊದಲು ಬೇರೆಲ್ಲೂ ಪ್ರದರ್ಶಿಸಿರಬಾರದು.
4. ಸಂಭಾವನೆಯ ಮೊತ್ತವನ್ನು ನಾಟಕ ಪ್ರದರ್ಶನದ ಬಳಿಕ ಆಯಾ ತಂಡಗಳಿಗೆ ಕೊಡಲಾಗುವುದು.

ಆಸಕ್ತ ತಂಡಗಳು ತಮ್ಮ ಸಂಸ್ಥೆಯ ಪರಿಚಯ, ಈ ಹಿಂದೆ ಪ್ರದರ್ಶಿಸಿದ ನಾಟಕಗಳ ವಿವರ ಹಾಗು ಪೂರಕ ಸಾಹಿತ್ಯ ಮುಂತಾದವುಗಳನ್ನು ಸಂಘದ ಕಾರ್ಯಾಲಯಕ್ಕೆ ಕಳುಹಿಸಿ ಕೊಡಬೇಕು. ಹೆಚ್ಚಿನ ವಿವರಗಳಿಗೆ ಸಂಘದ ಗೌ. ಪ್ರ. ಕಾರ್ಯದರ್ಶಿ ಯವರನ್ನು ಸಂಪರ್ಕಿಸಬಹುದು.

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38